




E-Bengaluru Beragu

MAG (2) PRB/CR/36/24-25
T/KN2024/2076


# ಈ–ಬೆಂಗಳೂರು ಬೆರಗು


ಸಂಪುಟ: 2 Vol: 2 ಸಂಚಿಕೆ: 3 Issue: 3 ಜುಲೈ 01 - 15 ಪುಟಗಳು: 12 Pages: 12 ಬೆಲೆ: 15.00 ರೂ.


## ಆರು ದಶಕದ ಕ್ರಿಕೆಟ್ ಕನಸು–ಭಾರತದ ಎಜ್ ಬ್ಯಾಸ್ಟನ್ ಟೆಸ್ಟ್ ವಿಜಯ




## ಬೆಂಗಳೂರು ಸುರಂಗ ಮಾರ್ಗ – ಟ್ರಾಫಿಕ್ ಜಾಮ್‌ಗೆ ಮುಕ್ತಿಯೆಂದು?






## ಕಾವೇರಿ ಜಲಾಶಯ ಭರ್ತಿ– ಜೂನ್‌ನಲ್ಲಿ ಕೆ.ಆರ್.ಎಸ್.ಗೆ ಬಾಗಿನ



## ಅಯೋಧ್ಯೆಯಲ್ಲಿ ಶ್ರೀರಾಮನ ಉಯ್ಯಾಲೆ





| | | | | |
|---|---|---|---|---|
| 1. ಪತ್ರಿಕಾ ಸುದ್ದಿ | 2. ಬೆರಗು ಚುಂಬಕ | 3. ಜ್ಞಾನ–ವಿಜ್ಞಾನ–ಪರಿಜ್ಞಾನ | 4. ಮಾಧ್ಯಮ ಸುದ್ದಿ | 5. ಆಡಳಿತ ಸುದ್ದಿ |
| 6. ಸಂಗೀತ ಸಮಾರಂಭ | 7. ಸಭೆ ಸಾಹಿತ್ಯ ಕವನ | 8. ಹಣಕಾಸು ವ್ಯಾಪಾರ | 9. ಆರೋಗ್ಯ ಮತ್ತು ವೈದ್ಯಕೀಯ | 10. ಇತಿಹಾಸ ಪುಟಗಳಿಂದ |
| 11. ಜಾಲತಾಣ ಬೆರಗು | 12. ಯೂಟ್ಯೂಬ್ ಲೋಕ | 13. ಸಿನಿಮಾ ರಂಗ | 14. ಕ್ರೀಡಾರಂಗ | 15. ಸಂಪಾದಕರ ಪುಟ |

## ಮುನ್ನುಡಿ

**ವಿ**ಶಾಲ ಕರ್ನಾಟಕದ ಕನ್ನಡ ಓದುಗ ಅಭಿಮಾನಿಗಳಲ್ಲಿ ವಿನಂತಿಯ ಬಿನ್ನಹ..........

ಕನ್ನಡ ನಾಡಿನ ಸಹೃದಯ ಅಕ್ಷರ ಮಿತ್ರರ ಪ್ರೇರೇಪಣೆಯಿಂದ ಉದಯವಾಗಿ ಅತ್ಯಂತ ಸ್ಪರ್ಧಾತ್ಮಕ ಮುದ್ರಣ ಪ್ರಪಂಚ/ಜಾಲತಾಣ ಮಾಧ್ಯಮದಲ್ಲಿ ಶ್ರಮವಹಿಸಿ ಹೊರತರುತ್ತಿರುವ ನಮ್ಮ ಈ ಪ್ರಯತ್ನ ಯಶಸ್ವಿಯಾಗಲು ಉತ್ಸಾಸಿ ಹೃದಯಗಳಲ್ಲಿ ಈ ಬೆಂಗಳೂರು ಬೆರಗು ಪಾಕ್ಷಿಕ ಪತ್ರಿಕೆಯನ್ನು ಪ್ರೋತ್ಸಾಹಿಸುವಂತೆ **'ಈ ಬೆಂಗಳೂರು ಬೆರಗು'** ತಂಡದ ಪರವಾಗಿ ಕೋರುತ್ತೇವೆ.

ದಿನದ, ವಾರದ, ತಿಂಗಳ ಟ್ಯಾಬ್ಲಾಡ್ ಸರಳಿ ಪ್ರಚುರವಾಗಿ ಮಾರುಕಟ್ಟೆಯಲ್ಲಿ ಬಿಡುಗಡೆಯಾಗುತ್ತಿರುವ ಈ ಕಠಿಣ ಸಮಯದಲ್ಲಿ, ಪ್ರತಿ ತಿಂಗಳಲ್ಲಿ ಎರಡು ಪಾಕ್ಷಿಕಗಳನ್ನು ನಿಖರವಾಗಿ ಹದಿನೈದನೇ ದಿನವೇ ಅಂದರೆ ಪ್ರತಿ ತಿಂಗಳು 1ನೇ ದಿನಾಂಕ ಹಾಗೂ 16ನೇ ದಿನಾಂಕದಿಂದ ಬಿಡುಗಡೆ ಮಾಡಲು ಸಿದ್ಧಪಡಿಸಿ ತಮ್ಮ ಮುಂದಿಡಲೂ ಪ್ರಯತ್ನಿಸಲಾಗುವುದು.

ಈ ಸಮಕಾಲೀನ ಮುಕ್ಕಾಲು ಪಾಲು ಟ್ಯಾಬ್ಲಾಡ್‌ಗಳಲ್ಲಿ ಸಂಚಲನಾತ್ಮಕ ಸುದ್ದಿಗೆ, ಕೊಲೆ, ರಾಜಕೀಯ ವೈಷಮ್ಯ ಹೊಡೆಬಡೆದಾಟಗಳ ದಾಟಿಯಲ್ಲಿ ಬರಹ ಮತ್ತು ಲೇಖನಗಳಿಗೆ ಆದ್ಯತೆ ನೀಡಿ ರಂಗು ರಂಗಾದ ವಿಷಯಗಳನ್ನು ಮುದ್ರಿಸಿ ಸ್ಪರ್ಧೆ ಏರ್ಪಟ್ಟಿರುವ ಮಾರುಕಟ್ಟೆಯಲ್ಲಿ ಗಮನ ಸೆಳೆಯಲು ಇದಕ್ಕೆ ಭಿನ್ನವಾಗಿ ನಮ್ಮ ಈ ಬೆಂಗಳೂರು ಬೆರಗು ಹೊರತರಲು ಪ್ರಯತ್ನಿಸುತ್ತಿದ್ದೇವೆ.

ಆದರೆ ನಮ್ಮ ಈ ಪಾಕ್ಷಿಕ ಸಾಧ್ಯವಾದ ಮಟ್ಟಿಗೆ ಅಂತಹ ಸಂಚಲನ, ಕ್ರೈಂ, ಸೆಕ್ಸ್ ಉನ್ಮಾದ ವಿಷಯಗಳ ಆದ್ಯತೆ ನೀಡದೆ ಪ್ರಕೃತಿ, ಪ್ರೇಮ, ಸಾಹಿತ್ಯ–ಸಂಗೀತ ಲೇಖನ ಹಾಗೂ ಚಿತ್ರಗಳಿಗೆ ಆದ್ಯತೆ ನೀಡಿ ಪ್ರಚಾರ ಮಾಡಲು ಪ್ರಯತ್ನಿಸುತ್ತೇವೆ. ಈ ಪ್ರಯತ್ನಕ್ಕೆ ಸುವಿಶಾಲ ಬೆಂಗಳೂರು ಮತ್ತು ಸಹೃದಯ ಕನ್ನಡ ಓದುಗರ ಪ್ರೀತಿ, ವಿಶ್ವಾಸ, ಪ್ರೋತ್ಸಾಹ ಹಾಗೂ ಆರ್ಶೀವಾದಗಳ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತಾ.

ಸದಾ ನಿಮ್ಮ ಸೇವೆಯಲ್ಲಿ
**ಸಂಪಾದಕರ ಸಲಹಾ ಮಂಡಳಿ**


## ವಿದ್ಯುತ್ ಸ್ಥಿರ ಶುಲ್ಕ ಮೇಲಿನ ತೆರಿಗೆ ಸಾಂವಿಧಾನಿಕವಲ್ಲ




**ಕ**ರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸ್ಥಿರ ಶುಲ್ಕಗಳ ಮೇಲೆ ವಿಧಿಸಿದ್ದ ತೆರಿಗೆಯು ಸಾಂವಿಧಾನಿಕವಲ್ಲ ಎಂದು ಹೈಕೋರ್ಟಿನಲ್ಲಿ ನಡೆದಿದ್ದ ರಿಟ್ ಅರ್ಜಿ ವಿಚಾರಣೆಯಲ್ಲಿ 2009ರಲ್ಲಿ ಕರ್ನಾಟಕ ವಿದ್ಯುತ್ (ಬಳಕೆಯ ಮೇಲಿನ ತೆರಿಗೆ) ಕಾಯ್ದೆ 1959ರ ಸೆಕ್ಷನ್ 3(1)ಗೆ ಮಾಡಲಾದ ತಿದ್ದುಪಡಿಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಎಫ್‌ಕೆಸಿಸಿಐ ಸೇರಿ ಇನ್ನಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆಯು 17 ವರ್ಷಗಳಿಂದ ಕರ್ನಾಟಕ ಹೈಕೋರ್ಟಿನಲ್ಲಿ ನಡೆದಿದ್ದು ಜೂನ್ 2025ರಲ್ಲಿ ಅಂತಿಮ ವಾದ–ವಿವಾದದ ನಂತರ ನ್ಯಾಯಮೂರ್ತಿ ರಾಮನಾಥ್ ಹೆಗ್ಡೆ ಅವರಿದ್ದ ಏಕಸದಸ್ಯ ಪೀಠ ಸ್ಥಿರಶುಲ್ಕ ಜಾರಿ ಮಾಡಿದ್ದು ಸಾಂವಿಧಾನಿಕವಲ್ಲ ಎಂದು ಆದೇಶ ನೀಡಿದೆ.

ಕರ್ನಾಟಕ ವಿದ್ಯುತ್ (ಬಳಕೆಯ ಮೇಲಿನ ತೆರಿಗೆ) 2003ರ ತಿದ್ದುಪಡಿ ಕಾಯ್ದೆ 7 2003ರ ಏಪ್ರಿಲ್ 1 ರಂದು ಹಾಗೂ 2004ರ ತಿದ್ದುಪಡಿ ಕಾಯ್ದೆ 5 2003ರ ಅಕ್ಟೋಬರ್ 16 ರಂದು ರಾಜ್ಯದಲ್ಲಿ ಜಾರಿಗೆ ಬಂದಿತ್ತು. ಕಾಯ್ದೆಯ ತಿದ್ದುಪಡಿಗಳು ಸ್ಥಿರ ಶುಲ್ಕಗಳು ಮತ್ತು ಬೇಡಿಕೆ ಶುಲ್ಕಗಳ ಮೇಲಿನ ವಿದ್ಯುತ್ ತೆರಿಗೆಯನ್ನು ವಿಧಿಸಲಾಗಿತ್ತು. ಇದರಿಂದ ಕೈಗಾರಿಕೆಗಳು ಮತ್ತು ಗ್ರಾಹಕರ ಮೇಲೆ ಹೆಚ್ಚಿನ ಆರ್ಥಿಕ ಹೊರೆಯಾಗಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಲಾಗಿತ್ತು.

2003 ರಿಂದ 2013ರ ಅವಧಿಯಲ್ಲಿ ಸ್ಥಿರ ಶುಲ್ಕಗಳು ಮತ್ತು ಬೇಡಿಕೆ ಶುಲ್ಕಗಳ ಮೇಲೆ ವಿದ್ಯುತ್ ತೆರಿಗೆ ವಿಧಿಸಿರುವುದು ಮತ್ತು ವಸೂಲಿ ಮಾಡಿರುವುದು ಅಸಾಂವಿಧಾನಿಕ ಎಂದು ನ್ಯಾಯಪೀಠ ಘೋಷಿಸಿದೆ. ಅಲ್ಲದೆ, 2009ರಿಂದ 2018ರವರೆಗೆ ವಸೂಲಿ ಮಾಡಲಾಗಿರುವ ತೆರಿಗೆ ಹಣವನ್ನು ಅರ್ಜಿದಾರರಿಗೆ ವಾಪಸ್ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ಪ್ರಕಟಿಸಿದೆ. 17 ವರ್ಷಗಳ ಸುದೀರ್ಘ ಕಾನೂನು ಹೋರಾಟಕ್ಕೆ ಗೆಲುವು ದೊರೆತಿದ್ದು, ಈ ಆದೇಶದಿಂದ ರಾಜ್ಯದಲ್ಲಿ ಕೈಗಾರಿಕಾ ವಲಯ ಹಾಗೂ ಗ್ರಾಹಕರಿಗೆ ಅನುಕೂಲವಾಗಲಿದೆ.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

### ಕಥೆ–ಕವನ ಕಳುಹಿಸುವ ಮುನ್ನ

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.
* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.
* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.
* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.
* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.
* ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ.
* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

# ಕಾವೇರಿ ಜಲಾಶಯ ಭರ್ತಿ–ಜೂನ್‌ನಲ್ಲಿ ಕೆಆರ್‌ಎಸ್‌ಗೆ ಬಾಗಿನ

**ಈ** ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸುರಿದ ಅಕಾಲಿಕ ಮಳೆ ಮತ್ತು ಕಾವೇರಿ ಉಗಮಸ್ಥಾನ ಕೊಡಗಿನ ಪ್ರದೇಶದಲ್ಲಿ ಜೂನ್ ತಿಂಗಳಲ್ಲಿ ಸುರಿದ ಧಾರಾಕಾರ ಮುಂಗಾರು ಮಳೆಯಿಂದಾಗಿ ಜೂನ್ 30ಕ್ಕೆ ಮುಂಚೆಯೇ ಕನ್ನಂಬಾಡಿಯ ಕಾವೇರಿ ಕಟ್ಟೆ ಕೃಷ್ಣರಾಜ ಜಲಸಾಗರವು ತುಂಬಿ ತುಳುಕಿ ಉಕ್ಕಿ ಹರಿದು ತಮಿಳುನಾಡಿನ ಮೆಟ್ಟೂರು ಅಣೆಕಟ್ಟಿನಂತ ಮೈದುಂಬಿ ಪ್ರವಹಿಸುತ್ತಿದೆ. ವರ್ಷದ ಮಳೆ ರೈತರ ಮೊಗದಲ್ಲಿ ಹರ್ಷ ತಂದಿದೆ. ಮುಂಗಾರು ಮಳೆಗೆ ಕರ್ನಾಟಕದ ಜೀವನದಿ ಕಾವೇರಿ ತುಂಬಿ ಹರಿಯುತ್ತಿದೆ. ಭರ್ಜರಿ ಮಳೆಗೆ ಅವಧಿಗೂ ಮುನ್ನವೇ ಕೆಆರ್‌ಎಸ್ ತುಂಬಿದ್ದು, ಈ ಹಿನ್ನೆಲೆ ತುಂಬಿದ ಕಾವೇರಿ ನದಿಗೆ ಸಿಎಂ ಸಿದ್ಧರಾಮಯ್ಯ ಅವರು ತುಂಬು ಮನಸ್ಸಿನಲ್ಲಿ ಬಾಗಿನ ಅರ್ಪಿಸಿದ್ದಾರೆ. ಇದೇ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಚಲುವರಾಯಸ್ವಾಮಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದ್ದಾರೆ. ಇದೊಂದು ವಿಶೇಷವಾದ ಮತ್ತು ಅಣೆಕಟ್ಟು ಕಟ್ಟಿ 93 ವರ್ಷಗಳಲ್ಲಿ 76 ಬಾರಿ ಭರ್ತಿಯಾದ ಕೆಆರ್‌ಎಸ್ ಅಣೆಕಟ್ಟಿನಲ್ಲಿ ವಿಶೇಷವಾದ ಪೂಜೆ ಸಲ್ಲಿಸಿದ್ದಾರೆ.

ಹಿಮಾಲಯದಲ್ಲಿ ಹುಟ್ಟುವ ಗಂಗಾ ನದಿಯಷ್ಟೇ ನಮ್ಮ ರಾಜ್ಯದಲ್ಲಿ ಹುಟ್ಟುವ ಕಾವೇರಿ ನದಿ ಪವಿತ್ರವಾದುದು. ಹುಟ್ಟು ಸಾವು, ಪ್ರಕೃತಿ, ಭೂಮಿ ಯಾವುದು ನಮ್ಮ ಕೈಯಲ್ಲಿ ಇಲ್ಲ. ಎಲ್ಲವೂ ಭಗವಂತನ ಕೈಯಲ್ಲಿದೆ. ಇನ್ನೊಬ್ಬರ ಜೀವನದಲ್ಲಿ ಎಷ್ಟು ಬದಲಾವಣೆ ತರುತ್ತೇವೆ, ಸಂತೋಷ ಉಂಟು ಮಾಡುತ್ತೇವೆ ಎನ್ನುವುದರಲ್ಲಿ ನಮ್ಮ ಬದುಕಿನ ಸಾರ್ಥಕತೆ ಅಡಗಿದೆ ಎಂದು ಮತ್ತು ನಮ್ಮ ಸರ್ಕಾರವು ಆಡಳಿತಕ್ಕೆ ಬಂದು ಎರಡು ವರ್ಷದಲ್ಲಿ ಹಲವಾರು ನೀರಾವರಿ ಯೋಜನೆಗಳಿಗೆ ಹಣ ಬಿಡುಗಡೆ ಮಾಡಿದ್ದು ಮುಖ್ಯವಾಗಿ ಈ ಆರ್ಥಿಕ ವರ್ಷದ ಆಯವ್ಯಯದಲ್ಲಿ ರೂ.25 ಸಾವಿರ ಕೋಟಿ ಅನುದಾನವನ್ನು ಪ್ರತ್ಯೇಕವಾಗಿ ಎಲ್ಲಾ ನೀರಾವರಿ ಯೋಜನೆಗಳಿಗೆ ಹಂಚಿಕೆ ಮಾಡಲಾಗುತ್ತದೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಉಪ ಮುಖ್ಯಮಂತ್ರಿಯವರು ಹೇಳಿದ್ದಾರೆ.

ಇದಲ್ಲದೆ ರೈತರ ಅಭಿವೃದ್ಧಿಗಾಗಿ ಮತ್ತು ಕೃಷಿ ಪ್ರಗತಿಗಾಗಿ ಈಗಾಗಲೇ ಹಾಲಿ ಇರುವ ಮೂರುವರೆ ಲಕ್ಷ ಪಂಪ್‌ಸೆಟ್‌ಗಳಿಗೆ ರೂ. 19 ಸಾವಿರ ಕೋಟಿ ಸರ್ಕಾರವೇ ಉಚಿತ ವಿದ್ಯುತ್ ನೀಡುತ್ತಿದೆ. ಇವೆಲ್ಲವನ್ನೂ ಸರ್ಕಾರವು ಜನರ ಒಳಿತಿಗಾಗಿ ರೈತರ ಆರ್ಥಿಕ ಅಭಿವೃದ್ಧಿಗಾಗಿ ವೆಚ್ಚ ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಪ್ರಸ್ತಾಪಿಸಿದ್ದಾರೆ.

'ನೀರಿಗೆ ಜಾತಿ, ಧರ್ಮವಿಲ್ಲ. ನೀರನ್ನು ಪೂಜಿಸುವುದು ನಮ್ಮ ಸಂಸ್ಕೃತಿ. ಕಾವೇರಿ




ಆರತಿಯಿಂದ ಸ್ಥಳೀಯರಿಗೆ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತವೆ' ಎಂದು ಹೇಳಿದರು. ಬೃಂದಾವನ ಉದ್ಯಾನವನವನ್ನು ಅತ್ಯುತ್ತಮ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಗುರಿ ಹೊಂದಿದ್ದೇವೆ ಎಂದ ಅವರು, ಮೇಕೆದಾಟು ಯೋಜನೆ ಜಾರಿಗೆ ಸರ್ಕಾರ ಸನ್ನದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು.

ಈ ಸಮಾರಂಭದಲ್ಲಿ ಸಚಿವರಾದ ಚಲುವರಾಯಸ್ವಾಮಿ, ಎಚ್.ಸಿ.ಮಹದೇವಪ್ಪ, ವೆಂಕಟೇಶ್, ಬೋಸರಾಜ್, ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ರವಿ ಗಣಿಗ, ಉದಯ್, ಹರೀಶ್ ಗೌಡ, ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಪುಟ್ಟರಂಗಶೆಟ್ಟಿ, ಎಂಎಲ್‌ಸಿಗಳಾದ ಮಧು ಮಾದೇಗೌಡ, ದಿನೇಶ್ ಗೂಳಿಗೌಡ, ತಮ್ಮಯ್ಯ ಮತ್ತಿತರು ಭಾಗವಹಿಸಿದ್ದರು.

# ಬೆಂಗಳೂರು ಸುರಂಗ ಮಾರ್ಗ – ಟ್ರಾಫಿಕ್ ಜಾಮ್‌ಗೆ ಮುಕ್ತಿಯೆಂದು?



**1**991 ರಿಂದ ಬೆಂಗಳೂರು ಮಹಾ ನಗರವು 330 ಕಿ.ಮೀ. ವಿಸ್ತೃತ ರಸ್ತೆ ಜಾಲವು ವಿಸ್ತೀರ್ಣವಾಗುತ್ತ ಅತಿ ಹೆಚ್ಚು ವಾಹನಗಳು ಮತ್ತು ಕೈಗಾರಿಕೆಗಳು ಅಭಿವೃದ್ಧಿ ಹೊಂದುವ ಸಮಯದಿಂದ 2006–07ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದ ತಕ್ಷಣದಿಂದಲೆ 625 ಚ.ಕಿ.ಮೀ. ವ್ಯಾಪ್ತಿಯ 11,000 ಕಿ.ಮೀ. ರಸ್ತೆಗಳನ್ನು ಹೊಂದಿ 4 ಒಳಭಾಗದ ವರ್ತುಲ ರಸ್ತೆಗಳು ಮತ್ತು 2 ಹೊರಭಾಗದ ಉದ್ದದ ವರ್ತುಲ ರಸ್ತೆಗಳು ಈ 30 ವರ್ಷಗಳಲ್ಲಿ ನಿರ್ಮಾಣವಾಗಿ ಅದಕ್ಕೆ ಹೊಂದಿಕೊಂಡಂತೆ 35 ಕಿ.ಮೀ. ಉದ್ದ ನೈಸ್ ರಸ್ತೆಯಲ್ಲೂ ಪ್ರತಿ ದಿನಕ್ಕೆ 6.5 ಲಕ್ಷ ವಾಹನಗಳ ಚಲನವಲನ ಓಡಾಟದಿಂದ ಇಡೀ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಎಂಬ ಪೆಡಂಭೂತ ವಕ್ಕರಿಸಿ ಕೂತಿದೆ. ಇದಕ್ಕೆ ಸ್ಥಳೀಯ ವಾಹನಗಳಲ್ಲದೆ ಸುಮಾರು 6.5 ಲಕ್ಷ ಸರಕು ಸಾಗಾಣೆ ಲಾರಿ, ಗೂಡ್ಸ್ ವಾಹನಗಳು ಮತ್ತು ಪ್ರಯಾಣಿಕರ ವಾಹನಗಳನ್ನು ಸೇರಿ ಜನನಿಬಿಡ ನಗರ ಪ್ರದೇಶದಲ್ಲಿ ವಾಹನದಟ್ಟಣೆಯಿಂದ ಸುಮಾರು 2 ಘಂಟೆಗಳಿಗೂ ಹೆಚ್ಚು ಕಾಲ ಮಂದಗತಿಯಲ್ಲಿ ಚಲಿಸಿ ಸಿಗ್ನಲ್ ಜಂಕ್ಷನ್‌ನಲ್ಲಿ ವಿಪರೀತವಾದ ವಾಹನ ದಟ್ಟಣೆಯಿಂದ ಬೆಂಗಳೂರು ನಾಗರಿಕರು ಹೈರಾಣವಾಗಿ ಇನ್ನಿಲ್ಲದ ಆರೋಗ್ಯ ಸಮಸ್ಯೆ ಮತ್ತು ಸಮಯಪೋಲು ಕಾರ್ಯವಿಳಂಬದಿಂದಾಗಿ ತಲ್ಲಣಗೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಪ್ರತಿ ಪ್ರಗತಿಪರಿಶೀಲನ ಸಮಯದಲ್ಲಿ ಈ ಟ್ರಾಫಿಕ್ ಜಾಮ್ ಮತ್ತು ವಾಹನ ದಟ್ಟಣೆಯನ್ನು ನಿವಾರಿಸಲು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಚರ್ಚಿಸಿದಾಗ ಕೇವಲ ವರ್ತುಲ ರಸ್ತೆ ಮತ್ತು ಮೆಟ್ರೊ ರೈಲ್ ಸಂಚಾರದಿಂದ ಕಡಿಮೆಯಾಗುವ ಲಕ್ಷಣಗಳು ಕಂಡುಬರದ ಪ್ರಯುಕ್ತ, ಬೆಂಗಳೂರು ಅಭಿವೃದ್ಧಿ ಪ್ರಗತಿಪಥಕ್ಕೆ ವಿಶ್ವದಾದ್ಯಂತ ಅತಿ ಹೆಚ್ಚು ಜನನಿಬಿಡ ಮತ್ತು ವಾಹನದಟ್ಟ ನಗರಗಳಲ್ಲಿ ಸ್ಥಾಪಿತಗೊಂಡ ಸುರಂಗಮಾರ್ಗ ವಾಹನ ಸಂಚಾರ ವ್ಯವಸ್ಥೆಯನ್ನು ಅಳವಡಿಸಿ ದಟ್ಟಣೆ ಕಡಿಮೆ ಮಾಡಲು ನೀಲನಕ್ಷೆಯನ್ನು ಸಿದ್ಧಪಡಿಸಲು ಈ ಎರಡು ವರ್ಷಗಳಲ್ಲಿ ಸರಣಿ ಸಭೆಗಳನ್ನು ನಡೆಸುತ್ತಾ ಬಂದಿದ್ದು, ನಮ್ಮ ಪತ್ರಿಕೆಯು ಈ ಸುರಂಗಮಾರ್ಗದ ವಿವರಗಳನ್ನು ಪಡೆದು ಅವಲೋಕಿಸಿದಾಗ ಮೇಲ್ನೋಟಕ್ಕೆ ನೀಲಿ ನಕ್ಷೆಯ ತಾಂತ್ರಿಕ ಕಾರ್ಯ ಸಾಧ್ಯತೆಗಳನ್ನು ವಿಶ್ಲೇಷಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.

ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್‌ವರೆಗೆ ಸುರಂಗ ರಸ್ತೆ ಉತ್ತರ–ದಕ್ಷಿಣ ಕಾರಿಡಾರ್‌ನ್ನು 16.69 ಕಿ.ಮೀ. ವಿಸ್ತೀರ್ಣದಲ್ಲಿ ಸುರಂಗ ರೂ.17,780 ಕೋಟಿ ಅಂದಾಜು ವೆಚ್ಚದಲ್ಲಿ ಸುರಂಗ ರಸ್ತೆ ನಿರ್ಮಾಣ ಮಾಡಲು ತಾಂತ್ರಿಕ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಹಾಗೆಯೇ ಕೆ.ಆರ್.ಪುರದಿಂದ ನಾಯಂಡಹಳ್ಳಿವರೆಗಿನ ಸುರಂಗ ರಸ್ತೆ ಪೂರ್ವ–ಪಶ್ಚಿಮ ಕಾರಿಡಾರ್‌ನ್ನು 28.181 ಕಿ.ಮೀ. ಸುರಂಗ ರೂ.25,022 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ತಾಂತ್ರಿಕ ಸಿದ್ಧತೆಗಳನ್ನು ತಯಾರಿಸಲಾಗಿದೆ.

ವಿಶ್ವದ ಅತಿ ಹೆಚ್ಚು ವಾಹನ ದಟ್ಟಣೆ ಮಹಾನಗರಗಳ ರಸ್ತೆ ಸಂಚಾರಿ ವ್ಯವಸ್ಥೆಗಳನ್ನು ಪರಿಶೀಲಿಸಿದಾಗ ಅಮೇರಿಕಾದ ಹಲವು ನಗರಗಳಲ್ಲಿ, ಜಪಾನ್ ಟೋಕಿಯೋ ನಗರದ ಯಾಮಾಟೆ ಸುರಂಗ ಮಾರ್ಗ, ಎಂ.30 ಸುರಂಗ ಜಾಲ, ಆಸ್ಟ್ರೇಲಿಯಾದ ಸಿಡ್ನಿ ಸುರಂಗ ಮಾರ್ಗ ಮತ್ತು ನಮ್ಮ ದೇಶದ ದೆಹಲಿ ಸುರಂಗ ಮಾರ್ಗಗಳ ವ್ಯಾಪ್ತಿ ಮತ್ತು ದಟ್ಟಣೆ ಕಡಿಮೆ ಮಾಡುವಲ್ಲಿ ತೆಗೆದುಕೊಂಡ ಕ್ರಮಗಳನ್ನು ವಿಶ್ಲೇಷಿಸಿ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ ಎಂದು, ಇವೆಲ್ಲವೂ ತಾಂತ್ರಿಕ ಪರಿಣಿತಿಯ ಮತ್ತು ಕಾರ್ಯಸಾಧು ಸಾಧ್ಯಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಣಿತರು ಮತ್ತು ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇಂಜಿನಿಯರ್‌ಗಳು ಅಂದಾಜು ಪಟ್ಟಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ತಿಳಿದು ಬಂದಿರುತ್ತದೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಹೆಬ್ಬಾಳದಿಂದ ರೇಷ್ಮೆ ಮಂಡಳಿಯ ವರೆಗಿನ 'ಸುರಂಗ ರಸ್ತೆ' ಯೋಜನೆಗೆ 2024ರ ಸೆಪ್ಟೆಂಬರ್, ಡಿಸೆಂಬರ್ ಹಾಗೂ 2025ರ ಫೆಬ್ರವರಿವರೆಗೆ ತಾಂತ್ರಿಕ ವಿಶ್ಲೇಷಣೆ ಅಂತಿಮ ಘಟ್ಟ ತಲುಪಿದೆ ಮತ್ತು ಟೆಂಡರ್ ಕರೆಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸುದ್ದಿ ಮಾಧ್ಯಮಕ್ಕೆ ತಿಳಿಸಿರುತ್ತಾರೆ.

ಸುಮಾರು ರೂ.18 ಸಾವಿರ ಕೋಟಿ ವೆಚ್ಚದಲ್ಲಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ನಡುವಿನ ಸುರಂಗ ರಸ್ತೆ ಬೂಟ್ (ಅಭಿವೃದ್ಧಿ, ಕಾರ್ಯಾಚರಣೆ, ವರ್ಗಾವಣೆ) ಆಧಾರದಲ್ಲಿ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಮತ್ತು 2030ರ ಒಳಗೆ ಸುರಂಗ ರಸ್ತೆ ಕಾಮಗಾರಿ ಪೂರ್ಣಗೊಳಿಸಲು, ಸರ್ಕಾರವು ಅನುಮೋದನೆ ನೀಡಲು ಮತ್ತು ನಿರ್ಧಾರ ಕೈಗೊಳ್ಳಲು ನಗರಾಭಿವೃದ್ಧಿ ಇಲಾಖೆಯು ಸಚಿವ ಸಂಪುಟಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ.

ಈ ಸುರಂಗಮಾರ್ಗ ರಸ್ತೆ ನಿರ್ಮಾಣದಿಂದ ವಾಹನ ದಟ್ಟಣೆ, ಇಂಧನ ಉಳಿತಾಯ ಮತ್ತು ವಿಶೇಷವಾಗಿ ಐಟಿಬಿಟಿ ವಲಯಕ್ಕೆ ಉತ್ತೇಜನ ನೀಡಲು ಹಾಗೂ ಸಾರ್ವಜನಿಕರ ಸಮಯ ಉಳಿಸಿ ನಗರದ ಅಭಿವೃದ್ಧಿಗೆ ಹೆಚ್ಚುವರಿ ಸವಲತ್ತುಗಳನ್ನು ಪಡೆಯುವಲ್ಲಿ ಯಶಸ್ವಿಯಾಗಬಹುದೆಂಬ ಯೋಚನೆಯೊಂದಿಗೆ ಈ ಯೋಜನೆ ಕಾರ್ಯಗತಗೊಳಿಸಲು ಸರ್ಕಾರವು ಕಟಿಬದ್ಧವಾಗಿದೆಯೆಂದು ಅನಿಸುತ್ತಿದ್ದು ಈ ಯೋಜನೆಯ ಸಂಪೂರ್ಣ ತಾಂತ್ರಿಕ ವ್ಯವಸ್ಥೆ ಮತ್ತು ಟೆಂಡರ್ ಪ್ರಕ್ರಿಯೆ ಪ್ರಾರಂಭವಾದ ನಂತರ ಕಾಮಗಾರಿ ಪೂರ್ಣಗೊಳಿಸುವಲ್ಲಿ ಎಷ್ಟು ಸಮಯ ತೆಗೆದುಕೊಳ್ಳಬಹುದೆಂದು ಮುಂದಿನ ದಿನಗಳಲ್ಲಿ ಬೆಂಗಳೂರು ನಗರ ಸಾರ್ವಜನಿಕರು, ವಾಹನ ಸಂಚಾರಕರು ಮತ್ತು ಕೈಗಾರಿಕೋದ್ಯಮಿಗಳು ಕಾದು ನೋಡಬಹುದು.

### ದೇಶ-ವಿದೇಶಗಳಲ್ಲೂ ಭಕ್ತಿ-ಭಾವದ ಜಗನ್ನಾಥ ಸ್ವಾಮಿಯ ಭವ್ಯ ರಥೋತ್ಸವ

# ವಿಶ್ವವಿಖ್ಯಾತ ಪುರಿ ಜಗನ್ನಾಥ ದೇವಾಲಯ



**ಜ**ಗನ್ನಾಥ ದೇವಾಲಯವು ಭಾರತದ ಪೂರ್ವ ಕರಾವಳಿಯಲ್ಲಿರುವ ಒಡಿಶಾ ರಾಜ್ಯದ ಕರಾವಳಿ ನಗರವಾದ ಪುರಿಯಲ್ಲಿದೆ. ಈ ದೇವಾಲಯುವು ಬಂಗಾಳ ಕೊಲ್ಲಿಯು ಸಮೀಪದಲ್ಲಿದೆ ಮತ್ತು ಹಿಂದೂಗಳ ನಾಲ್ಕು ಪವಿತ್ರ ಚಾರ್‌ಧಾಮ್ ಯಾತ್ರಾ ಸ್ಥಳಗಳಲ್ಲಿ ಒಂದಾಗಿದೆ.

ದೇವಾಲಯದ ಪ್ರಧಾನ ದೈವ ಶ್ರೀ ಜಗನ್ನಾಥ, ಶ್ರೀ ವಿಷ್ಣು ಅಥವಾ ಶ್ರೀ ಕೃಷ್ಣನ ರೂಪವೇ ಜಗನ್ನಾಥ ಸಹೋದರ ಶ್ರೀ ಬಲಭದ್ರ ಮತ್ತು ಸಹೋದರಿ ದೇವಿ ಸುಭದ್ರಾರೊಂದಿಗೆ ಜಗನ್ನಾಥನನ್ನು ಪೂಜಿಸಲಾಗುತ್ತದೆ. ವಿಗ್ರಹಗಳನ್ನು ಬೇವಿನ ಮರದಿಂದ ಮಾಡಲಾಗಿದ್ದು, ನವಕಲೇಬರ ಎಂಬ ವಿಧಿಯಲ್ಲಿ ಪ್ರತಿ 12 ರಿಂದ 19 ವರ್ಷಗಳಿಗೊಮ್ಮೆ ಬದಲಾಯಿಸಲಾಗುತ್ತದೆ. ಶ್ರೀ ಜಗನ್ನಾಥರ ವಿಗ್ರಹವು ತನ್ನ ವಿಶಿಷ್ಟ ಆಕಾರ, ದೊಡ್ಡ ದುಂಡು ಕಣ್ಣುಗಳು ಮತ್ತು ಗಿಡ್ಡ ಕಾಲುಗಳಿಂದ ಹೆಸರುವಾಸಿಯಾಗಿದೆ.

ಈ ದೇವಾಲಯುವು ಕಳಿಂಗ ವಾಸ್ತುಶಿಲ್ಪದ ಅದ್ಭುತ ಉದಾಹರಣೆಯಾಗಿದೆ, ಇದನ್ನು ರೇಖಾ ದೇವಾಲಯ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದು ಸುಮಾರು 65 ಮೀಟರ್ ಎತ್ತರದಲ್ಲಿದೆ ಮತ್ತು ಎತ್ತರದ ವೇದಿಕೆಯ ಮೇಲೆ ನಿರ್ಮಿಸಲಾಗಿದೆ. ದೇವಾಲಯದ ಸಂಕೀರ್ಣವು ಮೇಘನಾದ ಪಚೇರಿ ಎಂಬ 20 ಅಡಿ ಎತ್ತರದ ಬೃಹತ್ ಗೋಡೆಯಿಂದ ಆವೃತವಾಗಿದೆ. ಮುಖ್ಯ ಗರ್ಭಗುಡಿಗೆ (ಗರ್ಭಗೃಹ) ಎತ್ತರದ ಶಿಖರವಿದೆ. ದೇವಾಲಯವು ಸುಂದರವಾದ ಕೆತ್ತನೆಗಳು ಮತ್ತು ಸೂಕ್ಷ್ಮ ಶಿಲಾ ಶಿಲ್ಪಗಳನ್ನು ಹೊಂದಿದೆ. ಸಿಂಹದ್ವಾರ (ಸಿಂಹ ದ್ವಾರ) ಮುಖ್ಯ ಪ್ರವೇಶ ದ್ವಾರವಾಗಿದೆ, ಇದು ನಾಲ್ಕು ಭವ್ಯವಾದ ದ್ವಾರಗಳಲ್ಲಿ ಒಂದಾಗಿದೆ.

ದೇಗುಲದ ಭವ್ಯ ಇತಿಹಾಸ :

ಪ್ರಸ್ತುತ ದೇವಾಲಯದ ರಚನೆಯನ್ನು 12ನೇ ಶತಮಾನದಲ್ಲಿ ಪೂರ್ವ ಗಂಗಾ ರಾಜವಂಶದ ರಾಜ ಅನಂತವರ್ಮ ಚೋಡ ಗಂಗದೇವ ನಿರ್ಮಿಸಿದನು. ಆದಾಗ್ಯೂ, ಶ್ರೀ ಜಗನ್ನಾಥರ ಪೂಜೆಯು ಇನ್ನೂ ಹಿಂದೆಯೇ ಅಸ್ತಿತ್ವದಲ್ಲಿತ್ತು ಎಂದು ನಂಬಲಾಗಿದೆ. ಶತಮಾನಗಳಿಂದಲೂ, ದೇವಾಲಯವು ಹಲವಾರು ಆಕ್ರಮಣಗಳನ್ನು ಎದುರಿಸಿದ್ದರೂ, ವೈಷ್ಣವ ಸಂಪ್ರದಾಯದ ಪ್ರಮುಖ ಕೇಂದ್ರವಾಗಿ ಮುಂದುವರಿದಿದೆ. ಈ ದೇವಾಲಯುವು ಸಂತ ಆದಿ ಶಂಕರಚಾರ್ಯರಿಗೂ ಸಂಬಂಧಿಸಿದೆ. ಅವರು ತಮ್ಮ ಪೀಠಗಳಲ್ಲಿ ಒಂದನ್ನು ಇಲ್ಲಿ ಸ್ಥಾಪಿಸಿದರು.

ದೇವಾಲಯುದ ಅತ್ಯಂತ ಪ್ರಸಿದ್ಧ ಉತ್ಸವವೆಂದರೆ ರಥಯಾತ್ರೆ, ಇದನ್ನು ವಾರ್ಷಿಕವಾಗಿ ಆಷಾಢ ಮಾಸದಲ್ಲಿ (ಜೂನ್-ಜುಲೈ) ಆಚರಿಸಲಾಗುತ್ತದೆ. ಈ ಉತ್ಸವದಲ್ಲಿ, ದೇವರುಗಳನ್ನು ಗರ್ಭಗುಡಿಯಿಂದ ಹೊರತೆಗೆದು ಮೂರು ದೊಡ್ಡ ಮರದ ರಥಗಳ ಮೇಲೆ ಇರಿಸಲಾಗುತ್ತದೆ. ಈ ರಥಗಳನ್ನು ಸಾವಿರಾರು ಭಕ್ತರು ಜಗನ್ನಾಥ ದೇವಾಲಯದಿಂದ ಸುಮಾರು 3 ಕಿ.ಮೀ ದೂರದಲ್ಲಿರುವ ಗುಂಡಿಚಾ ದೇವಾಲಯಕ್ಕೆ ಎಳೆಯುತ್ತಾರೆ. ಒಂಬತ್ತು ದಿನಗಳ ನಂತರ, ದೇವರುಗಳು ಬಾಹುಡಾ ಯಾತ್ರೆ ಎಂಬ ಮರಳುವ ಪ್ರಯಾಣದಲ್ಲಿ ಮುಖ್ಯ ದೇವಾಲಯಕ್ಕೆ ಮರಳುತ್ತಾರೆ.

ಐತಿಹಾಸಿಕ ಪುರಿ ಜಗನ್ನಾಥ ದೇವಾಲಯದ ರಥಯಾತ್ರೆ ವೇಳೆ ಸಹಸ್ರಾರು ಭಕ್ತಾದಿಗಳು ರಥದ ಹಗ್ಗವನ್ನು ಎಳೆಯುತ್ತಾ 'ಜೈಜಗನ್ನಾಥ, ಹರಿ ಬೋಲ್' ಘೋಷಣೆಗಳನ್ನು ಮೊಳಗಿಸುತ್ತಾರೆ. ಗೋವರ್ಧನ ಪೀಠದ ಶಂಕರಾಚಾರ್ಯರು, ಸ್ವಾಮಿ ನಿಶ್ಚಲಾನಂದ ಸರಸ್ವತಿ ಸೇರಿದಂತೆ ವಿವಿಧ ಮಠಾಧೀಶರು, ಸ್ವಾಮಿಗಳು ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಈ ಸಮಯದಲ್ಲೇ ಆಚರಿಸಲಾಗುವ ಸಾಗರ ಸ್ನಾನ ಯಾತ್ರೆಯು 108 ಪಾತ್ರೆ ನೀರನ್ನು ಬಳಸಿ ದೇವರುಗಳಿಗೆ ವಿಧ್ಯುಕ್ತ ಸ್ನಾನವನ್ನು ಸೂಚಿಸುತ್ತದೆ. ಚಂದನ್ ಯಾತ್ರೆಯನ್ನು ಶ್ರೀಗಂಧದ ಲೇಪನ ವಿಧಿಗಳು ಮತ್ತು ದೇವರುಗಳ ದೋಣಿ ವಿಹಾರಗಳೊಂದಿಗೆ ಆಚರಿಸಲಾಗುತ್ತದೆ. ನಬಕಲೇಬರ, ಪ್ರತಿ 12 ರಿಂದ 19 ವರ್ಷಗಳಿಗೊಮ್ಮೆ ನಡೆಯುವ ಒಂದು ಅಪರೂಪದ ವಿಧಿಯಾಗಿದೆ, ಇದು ಮರದ ವಿಗ್ರಹಗಳನ್ನು ಹೊಸದಾಗಿ ಕೆತ್ತಿದ ವಿಗ್ರಹಗಳೊಂದಿಗೆ ಬದಲಾಯಿಸುವುದನ್ನು ಒಳಗೊಂಡಿದೆ. ಇತರ ಪ್ರಮುಖ ಸಂದರ್ಭಗಳಲ್ಲಿ ಮಕರ ಸಂಕ್ರಾಂತಿ, ಮಾಘ ಸಪ್ತಮಿ ಮತ್ತು ವಿವಿಧಇತರ ವೈಷ್ಣವ ಉತ್ಸವಗಳು ಸೇರಿವೆ, ಪ್ರತಿಯೊಂದನ್ನು ಆಳವಾದ ಭಕ್ತಿ, ವಿಧಿಗಳು, ಸಂಗೀತ ಮತ್ತು ನೃತ್ಯದೊಂದಿಗೆ ಆಚರಿಸಲಾಗುತ್ತದೆ, ಇದು ಭಾರತದಾದ್ಯಂತ ಮತ್ತು ಪ್ರಪಂಚದಾದ್ಯಂತ ಲಕ್ಷಾಂತರ ಭಕ್ತರನ್ನು ಆಕರ್ಷಿಸುತ್ತದೆ.

ಹೊರದೇಶಗಳಲ್ಲಿಯೂ ಸಹ ಪುರಿಜಗನ್ನಾಥ ಸ್ವಾಮಿಯ ರಥೋತ್ಸವವನ್ನು ಆಚರಿಸಲಾಗುತ್ತದೆ. ಪ್ರಮುಖವಾಗಿ, ವಿದೇಶಗಳಲ್ಲಿರುವ ಬಹುತೇಕ ಹಿಂದೂ ದೇವಾಲಯಗಳು ಮತ್ತು ಸಮುದಾಯಗಳು ಈ ಹಬ್ಬವನ್ನು ಆಯೋಜಿಸುತ್ತವೆ. ರಥ ಯಾತ್ರೆಗಳು ಜಗನ್ನಾಥ, ಬಲಭದ್ರ ಮತ್ತು ಸುಭದ್ರ ದೇವತೆಗಳನ್ನು ರಥಗಳಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡುವುದನ್ನು ಒಳಗೊಂಡಿರುತ್ತದೆ. ಈ ಹಬ್ಬವು ಭಕ್ತಿ, ಸಂಪ್ರದಾಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ.

ಅಮೆರಿಕ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್‌ಲೆಂಡ್, ಆಸ್ಟ್ರೇಲಿಯಾ, ಕೆನಡಾ, ಪೋಲೆಂಡ್, ಜಪಾನ್, ಚೀನಾ, ಪಾಕಿಸ್ತಾನ ಮೊದಲಾದ ದೇಶಗಳಲ್ಲಿನ ಹಿಂದು ಸಮುದಾಯದವರು ಜಗನ್ನಾಥ ಸ್ವಾಮಿಯ ಭವ್ಯ ರಥೋತ್ಸವವನ್ನು ಆಯೋಜಿಸುತ್ತಾರೆ. ವಿಶೇಷವಾಗಿ ನ್ಯೂಯಾರ್ಕ್, ವಾಷಿಂಗ್ಟನ್, ಲಂಡನ್, ಪ್ಯಾರಿಸ್, ಮಾಸ್ಕೋ ಮೊದಲಾದ ನಗರಗಳಲ್ಲಿ ನಡೆಯುವ ರಥೋತ್ಸವದಲ್ಲಿ ಸಹಸ್ರಾರು ಹಿಂದೂಗಳಷ್ಟೇ ಅಲ್ಲದೇ ವಿದೇಶೀಯರೂ ಕೂಡ ಭಾಗವಹಿಸಿದ್ದರು. ರಥೋತ್ಸವದ ನಿಮಿತ್ತ ವಿಶೇಷ ಪೂಜೆ ಮತ್ತು ಧಾರ್ಮಿಕ ಸಮಾರಂಭಗಳನ್ನು ಆಯೋಜಿಸಲಾಗುತ್ತದೆ.

ಮೆರವಣಿಗೆ: ರಥೋತ್ಸವದ ಪ್ರಮುಖ ಆಕರ್ಷಣೆ ಎಂದರೆ ರಥಗಳಲ್ಲಿ ಜಗನ್ನಾಥ, ಬಲಭದ್ರ ಮತ್ತು ಸುಭದ್ರ ದೇವತೆಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವುದು. ಈ ಮೆರವಣಿಗೆಯು ಭಕ್ತಿ ಮತ್ತು ಸಂಪ್ರದಾಯದ ಸಂಕೇತವಾಗಿದೆ. ಜಗನ್ನಾಥ ರಥಯಾತ್ರೆಯು ಭಕ್ತಿ, ಸಂಸ್ಕೃತಿ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಭಕ್ತರು ಈ ಹಬ್ಬದಲ್ಲಿ ಭಕ್ತಿಯಿಂದ ಪಾಲ್ಗೊಂಡು ದೇವರ ಆಶೀರ್ವಾದ ಪಡೆಯುತ್ತಾರೆ.

ರಥಯಾತ್ರೆ ಒಂದು ಪ್ರಮುಖ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಯಾಗಿದೆ. ಇದು ಭಾರತೀಯ ಸಂಸ್ಕೃತಿಯಲ್ಲಿ ಒಂದು ಪ್ರಮುಖ ಭಾಗವಾಗಿದೆ ಮತ್ತು ವಿದೇಶಗಳಲ್ಲಿಯೂ ಸಹ ಆಚರಿಸಲಾಗುತ್ತದೆ.

**ಸಂಗ್ರಹ ಲೇಖನ: ಮೈಸೂರು ವಾಸುದೇವಮೂರ್ತಿ**

# ಹೊಸ ಯುಗದಲ್ಲಿ ಹೊಸ ಯುಗದ ವಿಶ್ವದ ಅತಿ ದೊಡ್ಡ ಕ್ಯಾಮೆರಾ

**ವಿ**ಶ್ವದ ಅತಿದೊಡ್ಡ ಕ್ಯಾಮೆರಾ ತನ್ನ ಕಣ್ಣನ್ನು ತೆರೆಯಲು ಹೊರಟಿದೆ, 3,200 ಮೆಗಾಪಿಕ್ಸೆಲ್ ಅತಿ ದೊಡ್ಡ ಕ್ಯಾಮೆರಾವನ್ನು ದಕ್ಷಿಣ ಅಮೇರಿಕಾದ ಚಿಲಿ ದೇಶದ ವೆರಾ ಸಿ ರೂಬಿನ್ ಅಬ್ಸರ್ವೇಟರಿಯಲ್ಲಿ ತಯಾರಿಸಿ ಅದ್ಭುತಗಳನ್ನು ಸೆರೆ ಹಿಡಿಯಲು ಸಜ್ಜುಗೊಳಿಸಲಾಗಿದೆ. ಇದೇ ಜೂನ್ 2025ರ 23ನೇ ತಾರೀಖು ಭಾರತದ ಕಾಲಮಾನ ರಾತ್ರಿ 11.00 ಗಂಟೆಯಲ್ಲಿ ಈ 3,200 ಮೆಗಾಪಿಕ್ಸೆಲ್ ಕ್ಯಾಮೆರಾವು ಕಣ್ಣು ತೆರೆಯಲಿದ್ದು ಆಕಾಶದ ಮೂಲೆ ಮೂಲೆಗಳಲ್ಲಿನ ವಿಶ್ವದ ಅದ್ಭುತಗಳನ್ನು ಗ್ಯಾಲಕ್ಸಿ ಮಾದರಿಗಳನ್ನು ಸೆರೆಹಿಡಿಯುವ ಮೂಲಕ ಮಾನವ ಕುಲಕ್ಕೆ ಹಿಂದೆಂದೂ ಕಾಣದ ದೃಷ್ಟಿಗೆ ಸಿಗದ ಚಿತ್ರಗಳನ್ನು ಪ್ರಸ್ತುತಪಡಿಸುತ್ತದೆ.

20 ಬಿಲಿಯನ್ ಗೆಲಾಕ್ಸಿಗಳನ್ನು ನಕ್ಷೆ ಮಾಡುವ ಉದ್ದೇಶದಿಂದ ಡಿಜಿಟಲ್ ಕ್ಯಾಮೆರಾ ವರ್ಡ್.ಕಾಮ್ ವರದಿ ಮಾಡಿದಂತೆ ಖಗೋಳವಿಜ್ಞಾನದ ಭವಿಷ್ಯದ ಬದ್ಧತೆಗಳೆಂದು ನಿರೂಪಿಸಲ್ಪಡುವ ಕ್ಷಣಕ್ಷಣದ ಮಾಹಿತಿಯನ್ನು ಮತ್ತು ಕಣಕಣದ ಮಾಹಿತಿಯನ್ನು ಪ್ರತಿಕ್ಷಣವು ಬಾಹ್ಯಾಕಾಶ ವೀಕ್ಷಣೆಗೆ ಒಂದು ಮಹತ್ವದ ತಿರುವು ಎಂದು ಗುರುತಿಸಲ್ಪಟ್ಟಿದ್ದನ್ನು ಸೆರೆಹಿಡಿದು ವಿಜ್ಞಾನಿಗಳ ಪರಿಶೋಧನೆ ಮತ್ತು ಸಂಶೋಧನೆಗೆ ಇಂಬುಕೊಡುತ್ತದೆ. ಇದೇ ರೀತಿ ಕ್ಯಾಲಿಫೋರ್ನಿಯಾದ ಸ್ಲಾಕ್‌ನಲ್ಲಿ 2019 ರಲ್ಲಿ ಪ್ರಯಾಣವು ಪ್ರಾರಂಭವಾದ ಪ್ರಯಾಣವು ಬೃಹತ್ 5 ಮೀಟರ್ ಲೆನ್ಸ್ ಅನ್ನು ನಿಖರವಾಗಿ ಜೋಡಿಸಲಾಗಿದೆ, ನಿಖರತೆಯೊಂದಿಗೆ ಪ್ರತಿಯೊಂದು ಲೆನ್ಸ್ ತುಣುಕುಗಳನ್ನು ಒಟ್ಟುಗೂಡಿಸಲಾಗಿದೆ, ಈಗ ಗೋಚರವಾಗಿರುವ ದೃಷ್ಟಿಗೆ ತಕ್ಕಂತೆ 3200 ಮೆಗಾಪಿಕ್ಸೆಲ್ ಅಂಶಗಳಲ್ಲಿ ಸೆರೆಹಿಡಿದ ಚಿತ್ರಗಳನ್ನು ಇನ್ನೂ ಹೆಚ್ಚಿಗೆ ಜೀವಂತವಾಗಿ ಇರಿಸುವಲ್ಲಿ ಸಹಾಯ ಮಾಡುತ್ತದೆ. ಈ ಚಲನವಲನಗಳ ನಿಷ್ಪೇಜಕ ಚಿತ್ರಗಳನ್ನು ನಾವು ಬೆಳಿಗ್ಗೆ 11.00 ಕ್ಕೆ ಪೂರ್ವ ಅಮೇರಿಕಾ ನಿಗದಿತ ಸಮಯದಲ್ಲಿ ಮೊದಲ ಬಾರಿಗೆ ಮೊದಲನೆಯ ನೋಟವು



ಪ್ರಪಂಚದಾದ್ಯಂತ ಪರದೆಗಳಿಗೆ ಮೇಲೆ ನೇರ ಪ್ರಸಾರವಾಗುವುದನ್ನು ನೋಡಬಹುದು. ಈ ಅತಿ ದೊಡ್ಡ ಕ್ಯಾಮೆರಾ ದೃಶ್ಯಗಳನ್ನು ನೋಡುವ ಕ್ಷಣದಲ್ಲಿ ನೂರಾರು ಸಾರ್ವಜನಿಕರ ಸಂಸ್ಥೆಯ ಕಣ್ಣುಗಳು ಮತ್ತು ಸಂಶೋಧನಾ ವಿದ್ವಾಂಸರ ಮನಪಟಲಗಳು ಸೇರುತ್ತವೆ. ನಾವು ಅದರೊಂದಿಗೆ ವಿಶ್ವದ ಅತ್ಯಾದ್ಭುತ ಹೊರಜಗತ್ತನ್ನು ಹೊಸ ಯುಗದ ಕ್ಯಾಮೆರಾದ ಬಾಹ್ಯಾಕಾಶ ಚಿತ್ರಗಳನ್ನು ಪೃಥ್ವಿಯಿಂದ ಸಾವಿರಾರು ಕಿಲೋಮೀಟರ್‌ಗಳ ದೂರದಿಂದ ಸೆರೆಹಿಡಿಯುವ ಅತ್ಯಾದ್ಭುತ ಕ್ಷಣಗಳನ್ನು ಆಹ್ಲಾದಿಸುವ ನಮ್ಮ ಈ ಜಾಯಮಾನದ ಮತ್ತು ಮನುಕುಲದ ಅದ್ಭುತ ಕ್ಷಣಗಳು ಮತ್ತು ಅದೃಷ್ಟವು ನಮ್ಮದಾಗುತ್ತದೆ. ನಾವೆಲ್ಲರೂ, ನೀವೆಲ್ಲರೂ ಈ ಕ್ಷಣಗಳನ್ನು, ಚಿತ್ರಗಳನ್ನು ತಪ್ಪದೇ ವೀಕ್ಷಿಸಿ ಈ ಶತಮಾನದ ಮಾನವ ಪ್ರಯತ್ನದ ಅತ್ಯಂತ ಅದ್ಭುತ ಮತ್ತು ಅತಿ ದೊಡ್ಡ ಸಂಶೋಧನೆ ಅನಾವರಣಗೊಂಡ ಕ್ಷಣಗಳನ್ನು ಮನತುಂಬಿಸಿಕೊಳ್ಳೋಣ ಬನ್ನಿ, ವೀಕ್ಷಿಸಿ. ಆನಂದಿಸಿ. ಜಾಲತಾಣ ಮತ್ತು ಯೂಟ್ಯೂಬ್‌ನಲ್ಲಿ ಲಭ್ಯವಿರುತ್ತದೆ.

# ಜುಲೈ 29ರಂದು ರಾಮಮಂದಿರದಲ್ಲಿ ಚಿನ್ನದ ಉಯ್ಯಾಲೆ ಸೇವೆ!

**ಅ**ಯೋಧ್ಯೆಯಲ್ಲಿ ಶತ ಶತಮಾನಗಳಿಂದ ಜೂಲನೋತ್ಸವ ಸಂಪ್ರದಾಯ ನಡೆದುಕೊಂಡು ಬಂದಿದೆ. ಜೂಲನೋತ್ಸವ ಎಂದರೆ ಉಯ್ಯಾಲೆ ಪಲ್ಲಕ್ಕಿ ಸೇವೆ. ಶ್ರಾವಣ ಮಾಸದ ಪಂಚಮಿಯಿಂದ ಹುಣ್ಣಿಮೆವರೆಗೂ ಅಯೋಧ್ಯೆಯ ದೇವಾಲಯಗಳಲ್ಲಿ ಜೂಲನೋತ್ಸವ ನಡೆಯಲಿದೆ.

ಆ ದಿನ ವಾಡಿಕೆಯಂತೆ ಉಯ್ಯಾಲೆ ಪಲ್ಲಕ್ಕಿಯಲ್ಲಿ ಅಯೋಧ್ಯೆಯಲ್ಲಿ ಮೆರವಣಿಗೆಯ ಮೂಲಕ ಶ್ರೀರಾಮನ ಜನ್ಮಸ್ಥಾನ ಪ್ರದೇಶಕ್ಕೆ ಕೊಂಡೊಯ್ಯುವ ಪರಿಪಾಠವಿದ್ದು ಈ ವರ್ಷವೂ ಜೂಲನೋತ್ಸವದಂದು ಚಿನ್ನದ ಉಯ್ಯಾಲೆ ಪಲ್ಲಕ್ಕಿಯಲ್ಲಿ ನಡೆಸಲು ಅಯೋಧ್ಯ ಶ್ರೀರಾಮ ಪ್ರತಿಷ್ಠಾನ ಮತ್ತು ಉತ್ತರ ಪ್ರದೇಶ ಸರ್ಕಾರವು ನಿರ್ಧರಿಸಿದ್ದು ಎರಡು 2 ಭವ್ಯ ಚಿನ್ನದ ಉಯ್ಯಾಲೆಗಳನ್ನು ತಮಿಳುನಾಡಿನ ಚೆನ್ನೈನ ಕುಶಲಕರ್ಮಿಗಳು ಬಹಳ ಸೂಕ್ಷ್ಮ ಮತ್ತು ಮುತುವರ್ಜಿಯಿಂದ ತಯಾರಿಸುತ್ತಿದ್ದಾರೆ. ಇದರಲ್ಲಿ ಅಡಕಗೊಳಿಸುವ ವಿವಿಧ



ವಜ್ರಗಳು, ಮಾಣಿಕ್ಯಗಳು ಮತ್ತು ಪಚ್ಚೆಗಳನ್ನು ಉಯ್ಯಾಲೆಗಳ ಮೇಲೆ ಜೋಡಿಸಲಾಗುತ್ತಿದೆ.

ಈ ಹಿಂದೆ 2021ರಲ್ಲಿ ಜೂಲನೋತ್ಸವ ಸಮಯದಲ್ಲಿ 21 ಕೆ.ಜಿ. ತೂಕದ ಬೆಳ್ಳಿ ಉಯ್ಯಾಲೆಯನ್ನು ಪಲ್ಲಕ್ಕಿ ಸೇವೆ ಮೇಲೆ ಶ್ರೀರಾಮಲಲ್ಲಾ ವಿಗ್ರಹವನ್ನು ಮೆರವಣಿಗೆಯಲ್ಲಿ ತಂದು ಪೂಜಿಸಲಾಗುತ್ತಿದ್ದು ಈ ವರ್ಷದಿಂದ ಸ್ವರ್ಣಜೂಲ (ಉಯ್ಯಾಲೆ)ಯಲ್ಲಿ ಕುಳ್ಳಿರಿಸಲಾಗಿ ಮೆರವಣಿಗೆಯ ಮೂಲಕ ತಂದು ಸ್ವರ್ಣ ಉಯ್ಯಾಲೆಯ ಶ್ರೀರಾಮನನ್ನು ಶ್ರಾವಣ ಮಾಸದ ಪಂಚಮಿಯಿಂದ ಹುಣ್ಣಿಮೆಯ ವರೆಗೂ ಅದ್ದೂರಿ ಮತ್ತು ವಿಜೃಂಭಣೆಯಿಂದ ಶ್ರೀರಾಮ ಶ್ರಾವಣ ಮಾಸದ ಉತ್ಸವಗಳನ್ನು ಆಚರಿಸಲಾಗುವುದೆಂದು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ರಾಮಲಲ್ಲಾ ಮತ್ತು ಮೊದಲ ಮಹಡಿಯಲ್ಲಿ ಚಿನ್ನದ ಉಯ್ಯಾಲೆಯಲ್ಲಿ ಕುಳಿತಿರುವ ಸೀತಾರಾಮರ ದರ್ಶನ ಪಡೆಯಲು ಭಕ್ತರಿಗೆ ಅವಕಾಶವಾಗಲಿದೆ.

# ಜುಲೈ 1ರಿಂದ ಹಲವು ಬದಲಾವಣೆ: ತತ್ಕಾಲ್, ಆಧಾರ್, ವಾಟ್ಸ್‌ಅಪ್, ಕ್ರೆಡಿಟ್ ಕಾರ್ಡ್, ಜಿಎಸ್‌ಟಿ, ಐಟಿ, ರೈಲುಯಾನಕ್ಕೆ ಅನ್ವಯ




**ಆನ್‌ಲೈನ್ ತತ್ಕಾಲ್ ಬುಕಿಂಗ್‌ಗೆ ಆಧಾರ್ ಕಡ್ಡಾಯ :** ಭಾರತೀಯ ರೈಲ್ವೆಯ ಐಆರ್‌ಸಿಟಿಸಿ ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್ ಮೂಲಕ ತತ್ಕಾಲ್ ಟಿಕೆಟ್ ಬುಕಿಂಗ್ ಮಾಡುವುದಕ್ಕೆ ಜುಲೈ 1 ರಿಂದ ಆಧಾರ್ ದೃಢೀಕರಣ ಕಡ್ಡಾಯವಾಗಲಿದೆ. ಪ್ರಯಾಣಿಕರು ತಮ್ಮ ಐಆರ್‌ಸಿಟಿಸಿ ಪ್ರೊಫೈಲ್‌ಗೆ ಆಧಾರ್ ಲಿಂಕ್ ಮಾಡಿ ದೃಢೀಕರಿಸಬೇಕು. ಜುಲೈ 15 ರಿಂದ ಆನ್‌ಲೈನ್‌ನಲ್ಲಿ ಬುಕ್ ಮಾಡಲಾದ ಎಲ್ಲ ತತ್ಕಾಲ್ ಟಿಕೆಟ್‌ಗಳಿಗೆ ಕಟ್ಟುನಿಟ್ಟಾಗಿ ಆಧಾರ್ ಆಧಾರಿತ ಒಟಿಪಿ ದೃಢೀಕರಣ ವ್ಯವಸ್ಥೆ ಜಾರಿಗೆ ಬರಲಿದೆ. ಇದರ ಜೊತೆಗೆ, ಬುಕಿಂಗ್ ವಿಂಡೋ ಆರಂಭವಾದ ಮೊದಲ 30 ನಿಮಿಷಗಳಲ್ಲಿ ಅಧಿಕೃತ ಏಜೆಂಟ್‌ಗಳು ತತ್ಕಾಲ್ ಟಿಕೆಟ್ ಬುಕ್ ಮಾಡುವುದನ್ನು ನಿಷೇಧಿಸಲಾಗುವುದು. ಪಿಆರ್‌ಎಸ್ ಕೌಂಟರ್‌ಗಳಲ್ಲಿ ಮತ್ತು ಏಜೆಂಟ್‌ಗಳ ಮೂಲಕ ಬುಕ್ ಮಾಡಲಾದ ತತ್ಕಾಲ್ ಟಿಕೆಟ್‌ಗಳಿಗೂ ಜುಲೈ ಮಧ್ಯಭಾಗದಿಂದ ಒಟಿಪಿ ದೃಢೀಕರಣ ಅಗತ್ಯವಾಗಲಿದೆ.

**ರೈಲ್ವೆ ಪ್ರಯಾಣ ದರ ಅತ್ಯಲ್ಪ ಏರಿಕೆ :** ದೇಶದಾದ್ಯಂತ ರೈಲು ಪ್ರಯಾಣ ದರವು ಜುಲೈ 1 ರಿಂದ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಲಿದೆ. ಪ್ರತಿ ಕಿ.ಮೀ.ಗೆ ಸಾಮಾನ್ಯ ರೈಲುಗಳ ಎರಡನೇ ಶ್ರೇಣಿ ಬೋಗಿಗಳಲ್ಲಿ ಅರ್ಧ ಪೈಸೆ, ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳ ಸ್ಲೀಪರ್ ಬೋಗಿಗಳಿಗೆ ಅರ್ಧ ಪೈಸೆ, ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳ ಸ್ಲೀಪರ್ ಬೋಗಿಗಳಿಗೆ ಒಂದು ಪೈಸೆ, ಹವಾನಿಯಂತ್ರಿತ ಬೋಗಿಗಳಿಗೆ ಎರಡು ಪೈಸೆ ಏರಿಕೆಯಾಗುವ ಸಾಧ್ಯತೆ ಇದೆ. ಸಬರ್ಬನ್, ಸೀಸನ್ ಟಿಕೆಟ್ ಮತ್ತು 500 ಕಿ.ಮೀ. ಒಳಗಿನ ಪ್ರಯಾಣಕ್ಕೆ ಏರಿಕೆ ಇಲ್ಲ.

**ಜಿಎಸ್‌ಟಿ ನಿಯಮ ಬದಲಾವಣೆ :** ನಮೂನೆ 3 ಬಿ ಮೂಲಕ ಜಿಎಸ್‌ಟಿಯ ಮಾಸಿಕ ರಿಟರ್ನ್ ಸಲ್ಲಿಸಿದರೆ ಈವರೆಗೆ ಅದನ್ನು ಪರಿಷ್ಕರಿಸಲು ಅವಕಾಶವಿತ್ತು. ಆದರೆ ಜುಲೈನಿಂದ ಹಾಗೆ ಮಾಡಲು ಅವಕಾಶ ಇಲ್ಲ. 3 ವರ್ಷ ಬಾಕಿ ಉಳಿಸಿಕೊಂಡಿರುವ ತೆರಿಗೆ ಪಾವತಿದಾರರು ಮಾಸಿಕ ಅಥವಾ ವಾರ್ಷಿಕ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವುದಕ್ಕೂ ಜುಲೈನಿಂದ ಅವಕಾಶ ನೀಡಲಾಗುವುದಿಲ್ಲ.

**ಆ್ಯಕ್ಸಿಸ್ ಬ್ಯಾಂಕ್‌ನಿಂದ ಎಟಿಎಂ, ಖಾತೆ ಶುಲ್ಕ ಪರಿಷ್ಕರಣೆ :** ಆ್ಯಕ್ಸಿಸ್ ಬ್ಯಾಂಕ್ ಜುಲೈ 1 ರಿಂದ ಉಳಿತಾಯ ಖಾತೆ, ಎನ್‌ಆರ್‌ಐ ಮತ್ತು ಟ್ರಸ್ಟ್ ಖಾತೆಗಳಿಗೆ ಪರಿಷ್ಕೃತ ಶುಲ್ಕಗಳನ್ನು ಜಾರಿಗೊಳಿಸಲಿದೆ. ಆ್ಯಕ್ಸಿಸ್ ಮತ್ತು ಆ್ಯಕ್ಸಿಸ್ ಅಲ್ಲದ ಎಟಿಎಂಗಳಲ್ಲಿ ಉಚಿತ ವಹಿವಾಟಿನ ಮಿತಿಯನ್ನು ದಾಟಿದ ಗ್ರಾಹಕರಿಗೆ ಪ್ರತಿ ವಹಿವಾಟಿಗೆ 23 ರೂ. ಶುಲ್ಕ ವಿಧಿಸಲಾಗುವುದು. ಇದು ಮೊದಲು 21 ರೂ. ಇತ್ತು.

**ಕ್ರೆಡಿಟ್ ಕಾರ್ಡ್ ಗ್ರಾಹಕರಿಗೆ ಹೊಸ ಶುಲ್ಕ:** ಕೆಲವು ಪ್ರಮುಖ ಬ್ಯಾಂಕ್‌ಗಳು ತಮ್ಮ ಕ್ರೆಡಿಟ್ ಕಾರ್ಡ್ ಸೇವಾ ಶುಲ್ಕಗಳನ್ನು ಜುಲೈ 1 ರಿಂದ ಪರಿಷ್ಕರಣೆ ಮಾಡಲಿವೆ. ಕೆಲವು ಸೇವೆಗಳಿಗೆ ಶೇ.1 ರಷ್ಟು ಮಾಸಿಕ ಗರಿಷ್ಠ 4599 ರೂ. ಶುಲ್ಕ ವಿಧಿಸಲಾಗುತ್ತದೆ. ರಿವಾರ್ಡ್ ಪಾಯಿಂಟ್ಸ್‌ನಲ್ಲೂ ಬದಲಾವಣೆ ಆಗಲಿವೆ.

**ಐಸಿಐಸಿಐ ಬ್ಯಾಂಕ್‌ನಿಂದ ಹೊಸ ಸೇವಾ ಶುಲ್ಕ :** ಜುಲೈ 1 ರಿಂದ ಮೆಟ್ರೋ ನಗರಗಳ ಎಟಿಎಂ ಬಳಕೆದಾರರು ಐಸಿಐಸಿಐ ಅಲ್ಲದ ಎಟಿಎಂಗಳಲ್ಲಿ 3 ಉಚಿತ ವಹಿವಾಟುಗಳನ್ನು ನಡೆಸಬಹುದು. ಆದರೆ ಮೆಟ್ರೋ ಅಲ್ಲದ ನಗರಗಳ ಗ್ರಾಹಕರಿಗೆ ವಹಿವಾಟುಗಳನ್ನು ನಡೆಸಬಹುದು. ಆದರೆ ಮೆಟ್ರೋ ಅಲ್ಲದ ನಗರಗಳ ಗ್ರಾಹಕರಿಗೆ 5 ಉಚಿತ ವಹಿವಾಟುಗಳು ಲಭ್ಯವಿರುತ್ತವೆ. ಇದನ್ನು ದಾಟಿದರೆ, ಪ್ರತಿಯೊಂದು ಹಣಕಾಸಿನ ವಹಿವಾಟುಗಳಿಗೆ 23 ರೂ. ಮತ್ತು ಹಣಕಾಸೇತರ ವಹಿವಾಟುಗಳಿಗೆ 8.50 ರೂ. ಶುಲ್ಕ ವಿಧಿಸಲಾಗುವುದು.

ಅಂತರಾಷ್ಟ್ರೀಯ ಎಟಿಎಂನಲ್ಲಿನ ವಿತ್‌ಡ್ರಾಗೆ 125 ರೂ. ಮತ್ತು ಐಎಂಪಿಎಸ್ ವರ್ಗಾವಣೆಗೆ ನವೀಕೃತ ಶುಲ್ಕ ಜಾರಿಗೆ ಬರಲಿವೆ.

**ಆದಾಯ ತೆರಿಗೆ ರಿಟರ್ನ್ ಗಡುವು ವಿಸ್ತರಣೆ, ಸೆಪ್ಟೆಂಬರ್ 15 ಅಂತಿಮ ದಿನ:** ಸಿಬಿಡಿಟಿ 2025–26ನೇ ಮೌಲ್ಯಮಾಪನ ವರ್ಷಕ್ಕೆ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ಗಡುವು ಜುಲೈ 31 ಇದ್ದಿದ್ದನ್ನು ಸೆಪ್ಟೆಂಬರ್ 15 ರವರೆಗೆ ವಿಸ್ತರಿಸಿದೆ. ಈ ವಿಸ್ತರಣೆಯಿಂದ ವೇತನದಾರರಿಗೆ ರಿಟರ್ನ್ ಸಲ್ಲಿಸಲು ಹೆಚ್ಚುವರಿಯಾಗಿ 46 ದಿನಗಳು ಲಭ್ಯವಾಗಲಿವೆ. ಆದರೆ, ಆದಾರ ತೆರಿಗೆ ಪೋರ್ಟಲ್‌ನಲ್ಲಿ ಗಡುವಿನ ದಿನಾಂಕದ ಸಮೀಪದಲ್ಲಿ ಹೆಚ್ಚಿನ ಟ್ರಾಫಿಕ್‌ನಿಂದ ಉಂಟಾಗುವ ತೊಂದರೆಗಳನ್ನು ತಪ್ಪಿಸಲು, ಸೆಪ್ಟೆಂಬರ್ 15 ರವರೆಗೆ ಕಾಯದೆ ಈಗಲೇ ಪ್ರಕ್ರಿಯೆಯನ್ನು ಆರಂಭಿಸಬಹುದು.

**ಎಸ್‌ಬಿಐ ಕಾರ್ಡ್–ವಿಮಾನ ಅಪಘಾತ ವಿಮೆ ಸ್ಥಗಿತ, ಜೂನ್ 15ರಿಂದಲೇ ಅನ್ವಯ:** ಉಚಿತ ವಿಮಾನ ಅಪಘಾತ ವಿಮೆಯ ಲಾಭ ಈಗ ಕೇವಲ ಪ್ರಾಥಮಿಕ ಕಾರ್ಡ್ ಹೋಲ್ಡರ್‌ಗೆ ಮಾತ್ರ ಅನ್ವಯವಾಗುತ್ತಿದೆ. ಜುಲೈ 15 ರಿಂದ, ಆಯ್ದ ಪ್ರೀಮಿಯಂ ಕಾರ್ಡ್‌ಗಳಲ್ಲಿ ಈ ವಿಮೆಯನ್ನು ಸ್ಥಗಿತಗೊಳಿಸಲಾಗುತ್ತದೆ. ಆದ್ದರಿಂದ, ಎಸ್‌ಬಿಐ ಕಾರ್ಡ್ ಎಲೀಟ್, ಮೈಲ್ಸ್ ಎಲೀಟ್ ಮತ್ತು ಮೈಲ್ಸ್ ಪ್ರೈಮ್ ಕಾರ್ಡ್‌ಗಳಿಗೆ 1 ಕೋಟಿ ರೂ. ಕವರ್ ಇನ್ನು ಮುಂದೆ ಲಭ್ಯವಿರುವುದಿಲ್ಲ. ಜೊತೆಗೆ, ಎಸ್‌ಬಿಐ ಕಾರ್ಡ್ ಪ್ರೈಮ್ ಮತ್ತು ಪಲ್ಸ್‌ಗೆ 50 ಲಕ್ಷ ರೂ. ಕವರ್ ಕೂಡ ರದ್ದಾಗಲಿದೆ.



# ನಮ್ಮ ಸಂಸ್ಕೃತಿ, ಪರಂಪರೆಯ ಹೆಮ್ಮೆ ಕರ್ನಾಟಕ ಶಾಸ್ತ್ರೀಯ ಸಂಗೀತ



**ಪ್ರಾ**ಚೀನ ಕಾಲದಿಂದಲೂ ಭಾರತದಲ್ಲಿ ಪ್ರಚಲಿತದಲ್ಲಿದ್ದ ಸಂಗೀತ ವ್ಯವಸ್ಥೆಯ ಇತಿಹಾಸವು ವೇದಗಳವರೆಗೆ ತಲುಪುತ್ತದೆ. ಹೊಸ ರೀತಿಯ ಸಂಗೀತ ಅಭಿವ್ಯಕ್ತಿಯ ಅನ್ವೇಷಣೆಯಲ್ಲಿ ಮನುಷ್ಯನ ಪ್ರತಿಭೆ ಎಷ್ಟೊಂದು ಎತ್ತರಕ್ಕೆ ಏರಬಹುದು ಎಂಬುದನ್ನು ಭಾರತೀಯ ಸಂಗೀತ ವ್ಯವಸ್ಥೆಯು ತೋರಿಸುತ್ತದೆ. ಅದರ ಮನರಂಜನಾ ಮೌಲ್ಯದ ಹೊರತಾಗಿ, ಮಾನವಕುಲವನ್ನು ಉದಾತ್ತ ಮಟ್ಟಕ್ಕೆ ಏರಿಸುವ ಗುಣಮಟ್ಟಕ್ಕಾಗಿ ಸಂಗೀತವನ್ನು ಪಾಲಿಸಲಾಯಿತು ಮತ್ತು ಅಭ್ಯಾಸ ಮಾಡಲಾಯಿತು, ಇದು ಆತ್ಮವು ಶಾಶ್ವತ ಆನಂದವನ್ನು ಪಡೆಯಲು ಅನುವು ಮಾಡಿಕೊಡುತ್ತದೆ. ಪರಿಪೂರ್ಣ ಸ್ವರ ವ್ಯವಸ್ಥೆ ಮತ್ತು ಭಾರತೀಯ ಸಂಗೀತದ ವ್ಯಾಪಕವಾದ ರಾಗ ಮತ್ತು ತಾಳ ವ್ಯವಸ್ಥೆಗಳು ಇದನ್ನು ಪ್ರಪಂಚದ ಯಾವುದೇ ಅತ್ಯಾಧುನಿಕ ಸಂಗೀತ ವ್ಯವಸ್ಥೆಯೊಂದಿಗೆ ಹೋಲಿಸುವಂತೆ ಮಾಡುತ್ತದೆ.

ಸಂಗೀತದ ಬಗ್ಗೆ ನಮಗಿರುವ ಆರಂಭಿಕ ಗ್ರಂಥವೆಂದರೆ ಭರತನ ನಾಟ್ಯ ಶಾಸ್ತ್ರ. ಭರತನ ನಂತರದ ಸಂಗೀತದ ಕುರಿತಾದ ಇತರ ಗ್ರಂಥಗಳಾದ ಮಾತಂಗನ ಬೃಹದ್ದೇಶಿ, ಶಾರಂಗದೇವನ ಸಂಗೀತ ರತ್ನಾಕರ, ಹರಿಪಾಲನ ಸಂಗೀತ ಸುಧಾಕರ, ರಾಮಮಾತ್ಯನ ಸ್ವರಮೇಳ ಕಲಾನಿಧಿ ಇತ್ಯಾದಿಗಳು ಸಂಗೀತದ ವಿವಿಧ ಅಂಶಗಳು ಮತ್ತು ವಿಭಿನ್ನ ಅವಧಿಗಳಲ್ಲಿ ಅದರ ಬೆಳವಣಿಗೆಯ ಬಗ್ಗೆ ಮಾಹಿತಿಯ ಸಂಗ್ರಹವನ್ನು ನಮಗೆ ಒದಗಿಸುತ್ತವೆ.

ದಕ್ಷಿಣ ಭಾರತದ ಪ್ರಾಚೀನ ತಮಿಳರು ಸಹ ಅದರ ಸೋಲ್ಫಾ ವಿಧಾನಗಳು, ಸಾಮರಸ್ಯ ಮತ್ತು ಅಸಂಗತ ಸ್ವರಗಳು, ಮಾಪಕಗಳು ಮತ್ತು ವಿಧಾನಗಳು ಇತ್ಯಾದಿಗಳೊಂದಿಗೆ ಹೆಚ್ಚು ವಿಕಸಿತವಾದ ಸಂಗೀತ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ್ದರು. ಹಾಡು ಮತ್ತು ನೃತ್ಯದೊಂದಿಗೆ ಹಲವಾರು ವಾದ್ಯಗಳನ್ನು ಸಹ ಬಳಸಲಾಗುತ್ತಿತ್ತು. 2ನೇ ಶತಮಾನದ ತಮಿಳು ಶ್ರೇಷ್ಠ ಶಿಲಪ್ಪಧಿಕಾರಂ ಎಂಬ ಶೀರ್ಷಿಕೆಯು ಆ ಅವಧಿಯ ಸಂಗೀತದ ಎದ್ದುಕಾಣುವ ವಿವರಣೆಯನ್ನು ಒಳಗೊಂಡಿದೆ. 7 ನೇ ಮತ್ತು 8 ನೇ ಶತಮಾನಗಳ ಟೋಲ್ಕಪ್ಪಿಯಂ, ಕಲ್ಲಡಂ ಮತ್ತು ಶೈವ ಮತ್ತು ವೈಷ್ಣವ ಸಂತರ ಕೊಡುಗೆಗಳು ಸಂಗೀತ ಇತಿಹಾಸವನ್ನು ಅಧ್ಯಯನ ಮಾಡಲು ಸಂಪನ್ಮೂಲ ಸಾಮಗ್ರಿಯಾಗಿ ಕಾರ್ಯನಿರ್ವಹಿಸುತ್ತವೆ.

ಭಾರತೀಯ ಸಂಗೀತದ ವಿಕಾಸದ ಹಾದಿಯಲ್ಲಿ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಎಂಬ ಎರಡು ವಿಭಿನ್ನ ಉಪ ವ್ಯವಸ್ಥೆಗಳು ಹೊರಹೊಮ್ಮಿದವು. 14ನೇ ಶತಮಾನದಲ್ಲಿ ಬರೆದ ಹರಿಪಾಲ ಅವರ "ಸಂಗೀತ ಸುಧಾಕರ"ದಲ್ಲಿ, ಕರ್ನಾಟಕ ಮತ್ತು ಹಿಂದೂಸ್ತಾನಿ ಎಂಬ ಪದಗಳು ಮೊದಲ ಬಾರಿಗೆ ಕಂಡುಬರುತ್ತವೆ. ಎರಡು ವಿಭಿನ್ನ ಶೈಲಿಗಳಾದ ಹಿಂದೂಸ್ತಾನಿ ಮತ್ತು ಕರ್ನಾಟಕವು ಮುಸ್ಲಿಮರ ಆಗಮನದ ನಂತರ, ವಿಶೇಷವಾಗಿ ದೆಹಲಿಯ ಮೊಘಲ್ ಚಕ್ರವರ್ತಿಗಳ ಆಳ್ವಿಕೆಯಲ್ಲಿ ಜನಪ್ರಿಯವಾಯಿತು. ಎರಡೂ ಸಂಗೀತ ವ್ಯವಸ್ಥೆಗಳು ಒಂದೇ ಮೂಲ ಮೂಲದಿಂದ ತಮ್ಮ ಪೋಷಣೆಯನ್ನು ಪಡೆದವು. ಭಾರತದ ಉತ್ತರ ಭಾಗದ ಭಾರತೀಯ ಸಂಗೀತವು ದೆಹಲಿಯ ಮೊಘಲ್ ಆಡಳಿತಗಾರರ ಆಸ್ಥಾನ ಗಳನ್ನು ಅಲಂಕರಿಸಿದ ಪರ್ಷಿಯನ್ ಮತ್ತು ಅರೇಬಿಕ್ ಸಂಗೀತಗಾರರ ಸಂಗೀತದ ಕೆಲವು ವೈಶಿಷ್ಟ್ಯಗಳನ್ನು ಸಂಯೋಜಿಸಿಕೊಂಡರೆ, ದಕ್ಷಿಣದ ಸಂಗೀತವು ತನ್ನದೇ ಆದ ಮೂಲ ಮಾರ್ಗಗಳಲ್ಲಿ ಅಭಿವೃದ್ಧಿ ಹೊಂದುತ್ತಲೇ ಇತ್ತು. ಆದರೆ ಉತ್ತರ ಮತ್ತು ದಕ್ಷಿಣದ ಎರಡೂ ವ್ಯವಸ್ಥೆಗಳ ಮೂಲಭೂತ ಅಂಶಗಳು ಒಂದೇ ಆಗಿವೆ.

ಇಂದು ತಿಳಿದಿರುವಂತೆ ದಕ್ಷಿಣ ಭಾರತೀಯ ಸಂಗೀತವು ಮಧ್ಯಯುಗದಲ್ಲಿ ಯಾದವರು ವಾಸಿಸುತ್ತಿದ್ದ ರಾಜಧಾನಿ ದೇವಗಿರಿಯಲ್ಲಿ ಪ್ರವರ್ಧಮಾನಕ್ಕೆ ಬಂದಿತು ಮತ್ತು ಮುಸ್ಲಿಮರು ನಗರದ ಮೇಲೆ ಆಕ್ರಮಣ ಮಾಡಿ ಲೂಟಿ ಮಾಡಿದ ನಂತರ, ನಗರದ ಸಂಪೂರ್ಣ ಸಾಂಸ್ಕೃತಿಕ ಜೀವನವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರದ ಕರ್ನಾಟಕ ಸಾಮ್ರಾಜ್ಯದಲ್ಲಿ ಆಶ್ರಯ ಪಡೆಯಿತು ಎಂದು ಹೇಳಲಾಗುತ್ತದೆ. ನಂತರ, ದಕ್ಷಿಣ ಭಾರತದ ಸಂಗೀತವು ಕರ್ನಾಟಕ ಸಂಗೀತ ಎಂದು ಕರೆಯಲ್ಪಟ್ಟಿತು.

1484 ರಲ್ಲಿ ಪುರಂದರದಾಸರ ಆಗಮನವು ಕರ್ನಾಟಕ ಸಂಗೀತದ ಬೆಳವಣಿಗೆಯಲ್ಲಿ ಬಹಳ ಮುಖ್ಯವಾದ ಮೈಲಿಗಲ್ಲು. ಅವರು ಕಲೆಯಲ್ಲಿ ಎಷ್ಟು ಸಂಪೂರ್ಣ ವ್ಯವಸ್ಥಿತೀಕರಣ ಮತ್ತು ಪರಿಷ್ಕರಣೆಯನ್ನು ಮಾಡಿದರು ಎಂದರೆ, ಇಂದಿನವರೆಗೂ ಅದು ಹಾಗೆಯೇ ಉಳಿದಿದೆ. ಅವರನ್ನು "ಕರ್ಣಾಟಕ ಸಂಗೀತ ಪಿತಾಮಹ" ಎಂದು ನ್ಯಾಯಯುತವಾಗಿ ಕರೆಯಲಾಗುತ್ತದೆ. ಅವರು ಕೇವಲ ಸಂಯೋಜಕರಲ್ಲ, ಆದರೆ ಅತ್ಯುನ್ನತ ದರ್ಜೆಯ ಲಕ್ಷಣಕಾರರು. ದಕ್ಷಿಣ ಭಾರತೀಯ ಸಂಗೀತ ವ್ಯವಸ್ಥೆ, ನಾವು ಈಗ ಹೊಂದಿರುವಂತೆ, ಸಂಪೂರ್ಣವಾಗಿ ಅವರ ಮುಂದಿನ ಪೀಳಿಗೆಗೆ ನೀಡಿದ ಕೊಡುಗೆಯಾಗಿದೆ. ಅವರು ಸಂಗೀತ ಬೋಧನೆಗೆ ಮೂಲ ಮಾಪಕವಾಗಿ ಮಲವಗೌಳ ಮಾಪಕವನ್ನು ಪರಿಚಯಿಸಿದರು. ಸಂಗೀತದ ಆರಂಭಿಕರಿಗಾಗಿ ಪಾಠಗಳ ಸರಣಿಯ ಭಾಗವಾಗಿ ಅವರು ಶ್ರೇಣೀಕೃತ ವ್ಯಾಯಾಮಗಳನ್ನು ಸಹ ರೂಪಿಸಿದರು. ಈ ವ್ಯವಸ್ಥೆಯು ಇಂದಿಗೂ ಸಂಗೀತ ಬೋಧನೆಯಲ್ಲಿ ಚಾಲ್ತಿಯಲ್ಲಿದೆ. ಪುರಂದರ ದಾಸರು ರಚಿಸಿದ ಸ್ವರಾವಲಿಗಳು, ಜನತಾ ವರಿಸೆಗಳು, ಸುಲಾದಿ ಸಪ್ತ ತಾಳ ಅಲಂಕಾರಗಳು ಮತ್ತು ಗೀತಂಗಳು ಕಲೆಯಲ್ಲಿ ಪಾಂಡಿತ್ಯಕ್ಕೆ ಆಧಾರವಾಗಿವೆ. ಸಂಯೋಜನೆಯ ಪ್ರಕಾರಗಳಲ್ಲಿ, ಅವರು ಹಲವಾರು ಲಕ್ಷ್ಯಗೀತೆಗಳು ಮತ್ತು ಲಕ್ಷಣಗೀತೆಗಳು, ತಾನ ವರ್ಣಗಳು, ತಿಲ್ಲಾನಗಳು, ಸುಳಾದಿಗಳು, ಉಗಾಭೋಗಗಳು, ವೃತ್ತನಾಮಗಳು ಮತ್ತು ಕೀರ್ತನೆಗಳನ್ನು ಹೊಂದಿದ್ದಾರೆ. ಅವರ ಕೀರ್ತನೆಗಳನ್ನು ಜನಪ್ರಿಯವಾಗಿ ದಾಸರ ಪದಗಳು ಅಥವಾ ದೇವರನಾಮಗಳು ಎಂದು ಕರೆಯಲಾಗುತ್ತದೆ.

17ನೇ ಶತಮಾನಕ್ಕೆ ಕಾಲಿಡುವ ಕರ್ನಾಟಕ ಸಂಗೀತದ ಇತಿಹಾಸವು 72 ಮೇಳಕರ್ತಗಳ ಯುಗಪ್ರವರ್ತಕ ಯೋಜನೆಯನ್ನು ಕಂಡಿತು, ಇದನ್ನು ವೆಂಕಟಮಖಿ ಪರಿಚಯಿಸಿದರು ಮತ್ತು 1620 ಕ್ರಿ.ಶ.ದಲ್ಲಿ ಅವರ ಸ್ಮಾರಕ ಕೃತಿ ಚತುರ್ದಂಡಿ ಪ್ರಕಾಶಕದಲ್ಲಿ ಸ್ಥಾಪಿಸಲಾಯಿತು. ಮೇಳಕರ್ತ ಯೋಜನೆಯು ಅತ್ಯಂತ ಸಮಗ್ರ ಮತ್ತು ವ್ಯವಸ್ಥಿತ ಸೂತ್ರವಾಗಿದ್ದು, ಇದು ಪ್ರಪಂಚದ ವಿವಿಧ ಭಾಗಗಳ ಪ್ರಾಚೀನ ಮತ್ತು ಆಧುನಿಕ ಸಂಗೀತ ವ್ಯವಸ್ಥೆಗಳಲ್ಲಿ ಬಳಸಲಾದ ಎಲ್ಲಾ ವಿಧಾನಗಳನ್ನು ಒಳಗೊಂಡಿದೆ. ಈ ಯೋಜನೆಯು ರಾಗ ಸೃಷ್ಟಿಯ ಹೊಸ ದೃಷ್ಟಿಕೋನಗಳನ್ನು ತೆರೆಯಿತು ಮತ್ತು ತ್ಯಾಗರಾಜರಂತಹ ನಂತರದ ಸಂಯೋಜಕರು ಅದನ್ನು ಅನುಸರಿಸುವ ಮೂಲಕ ಅನೇಕ ಸುಂದರವಾದ ರಾಗಗಳನ್ನು ಕಂಡು ಹಿಡಿದರು.

ಪ್ರಾಯೋಗಿಕ ಸಂಗೀತ ಕ್ಷೇತ್ರದಲ್ಲಿ, ದಕ್ಷಿಣ ಭಾರತದಲ್ಲಿ ಸಾವಿರಾರು ಸಂಗೀತ ಸಂಯೋಜನೆಗಳಿಂದ ಕಲೆಯನ್ನು ಶ್ರೀಮಂತಗೊಳಿಸಿದ ಪ್ರತಿಭಾನ್ವಿತ ಮತ್ತು ಸಮೃದ್ಧ ಸಂಯೋಜಕರ ಪರಂಪರೆ ಇತ್ತು. ಪುರಂದರದಾಸರ ನಂತರ, ತಳ್ಳಪಾಕಂ ಅನ್ನಮಾಚಾರ್ಯ ನಾರಾಯಣ ತೀರ್ಥ, ಭದ್ರ–ಚಲಂ ರಾಮದಾಸ ಮತ್ತು ಕ್ಷೇತ್ರಂಜ ಅವರು ಸಂಗೀತ ಸಂಯೋಜನೆಗಳ ಸಂಪತ್ತಿಗೆ ಕೊಡುಗೆಗಳನ್ನು ನೀಡಿದರು.

ಕ್ರಿ.ಶ. 1750 ರಿಂದ 1850 ರ ನಡುವೆ ತಿರುವರೂರಿನಲ್ಲಿ ಸಂಗೀತ ತ್ರಿಮೂರ್ತಿಗಳಾದ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರ್ ಮತ್ತು ಶ್ಯಾಮ ಶಾಸ್ತ್ರಿ ಅವರ ಜನನವು ಕರ್ನಾಟಕ ಸಂಗೀತದಲ್ಲಿ ಕ್ರಿಯಾತ್ಮಕ ಬೆಳವಣಿಗೆಯ ಯುಗಕ್ಕೆ ನಾಂದಿ ಹಾಡಿತು. ತ್ರಿಮೂರ್ತಿಗಳು ತಮ್ಮಲ್ಲಿ ಸಮಕಾಲೀನರು ಮಾತ್ರವಲ್ಲದೆ, ಬೀಥೋವನ್, ಮೊಜಾರ್ಟ್, ವ್ಯಾಗ್ನರ್ ಮತ್ತು ಹೇಡನ್ ಅವರಂತಹ ಪಾಶ್ಚಿಮಾತ್ಯ ಸಂಗೀತದ ಶ್ರೇಷ್ಠ ಸಂಯೋಜಕರ ಸಮಕಾಲೀನರು. ಇದು ಪ್ರಪಂಚದಾದ್ಯಂತ ಸಂಗೀತದ 'ಸುವರ್ಣಯುಗ'ವಾಗಿತ್ತು. ಈ ಅವಧಿಯಲ್ಲಿ ಕರ್ನಾಟಕ ಸಂಗೀತವು ಕಲಾತ್ಮಕ ಶ್ರೇಷ್ಠತೆಯ ಪರಾಕಾಷ್ಠೆಯನ್ನು ತಲುಪಿತು.

ತ್ರಿಮೂರ್ತಿಗಳ ನಂತರದ ಅವಧಿಯಲ್ಲಿ ಕರ್ನಾಟಕ ಸಂಗೀತದ ಕೀರ್ತಿ ಪತಾಕೆಯನ್ನು ಉತ್ತುಂಗಕ್ಕೇರಿಸಿದ್ದ ಸಂಗೀತ ಸಂಯೋಜಕರ ಸಮೂಹವೇ ಇತ್ತು. ವೀಣಾ ಕುಪ್ಪಯ್ಯರ್, ಪಟ್ನಂ ಸುಬ್ರಹ್ಮಣ್ಯ ಅಯ್ಯರ್, ರಾಮನಾಡ್ ಶ್ರೀನಿವಾಸ ಅಯ್ಯಂಗಾರ್, ಮೈಸೂರು ಸದಾಶಿವ ರಾವ್, ಮೈಸೂರು ವಾಸುದೇವಚಾರ್ ಮತ್ತು ಪಾಪನಾಸಂ ಶಿವನ್ ಇಲ್ಲಿ ಉಲ್ಲೇಖಿಸಬಹುದಾದ ಕೆಲವೇ ಹೆಸರುಗಳು.

1904 ರಲ್ಲಿ ಸುಬ್ಬರಾಮ ದೀಕ್ಷಿತರ್ ಬರೆದ ಸಂಗೀತ ಸಂಪ್ರದಾಯ ಪ್ರದರ್ಶಿನಿ, ಹಿಂದಿನ ಶತಮಾನಗಳ ಸಂಗೀತ, ಸಂಗೀತಗಾರರು ಮತ್ತು ಸಂಯೋಜಕರ ಬಗ್ಗೆ ಮಾಹಿತಿ ನೀಡುವ ಒಂದು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ.ದಕ್ಷಿಣದ ಅನೇಕ ಸಂಗೀತಗಾರರು ಮತ್ತು ಸಂಯೋಜಕರು ಹಿಂದೂಸ್ತಾನಿ ಸಂಗೀತ ಪದ್ಧತಿಯೊಂದಿಗೆ ನಿಕಟ ಪರಿಚಯ ಹೊಂದಿದ್ದರು ಮತ್ತು ಅನುಮತಿಸಿದಲ್ಲೆಲ್ಲಾ, ತಮ್ಮ ಸಂಯೋಜನೆಗಳಿಗಾಗಿ ಹಿಂದೂಸ್ತಾನಿ ರಾಗಗಳನ್ನು ಅಳವಡಿಸಿಕೊಂಡರು. ಯಮನ್ ಕಲ್ಯಾಣ್, ಹಮೀರ್ ಕಲ್ಯಾಣ್, ಮಲ್ಕೌಂಸ, ಬೃಂದಾವಣಿ ಸಾರಂಗ್, ಜೈಜೈವಂತಿ, ಇತ್ಯಾದಿ ರಾಗಗಳನ್ನು ಸಂಗೀತ ತ್ರಿಮೂರ್ತಿಗಳು ತಮ್ಮ ಸಂಯೋಜನೆಗಳಲ್ಲಿ ಅಳವಡಿಸಿಕೊಂಡರು. ರಾಗ ಕಫಿ, ಕನದ, ಖಮಾಜ್, ಪರಜ್, ಪೂರ್ವಿ, ಭೈರವ, ಇತ್ಯಾದಿಗಳು ಹಿಂದೂಸ್ತಾನಿ ಸಂಗೀತ ಪದ್ಧತಿಯಲ್ಲಿನ ಅವುಗಳ ಪ್ರತಿರೂಪಗಳಿಗೆ ಬಹಳ ಹತ್ತಿರದ ಹೋಲಿಕೆಯನ್ನು ಹೊಂದಿವೆ.

ನಿಬಾಧ ಮತ್ತು ಅನಿಬಾಧ ಸಂಗೀತಕ್ಕೆ ಸೇರಿದ ಸಂಗೀತ ಪ್ರಕಾರಗಳಿವೆ, ಅಂದರೆ, ಕಲ್ಪಿತ ಸಂಗೀತ ಮತ್ತು ಮನೋಧರ್ಮ ಸಂಗೀತ ಅಥವಾ ಸುಧಾರಿತ ಸಂಗೀತ. ಈ ಎಲ್ಲಾ ಪ್ರಕಾರಗಳನ್ನು ಸಾಮಾನ್ಯವಾಗಿ ಪವಿತ್ರ ಸಂಗೀತ, ಕಲಾ ಸಂಗೀತ, ಇತ್ಯಾದಿ ಎಂದು ವಿಭಿನ್ನ ತಲೆಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಈ ತಲೆಗಳ ಅಡಿಯಲ್ಲಿರುವ ಹಲವಾರು ಪ್ರಕಾರಗಳು ತಮ್ಮದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿವೆ. ಪ್ರಬಂಧಗಳು ಮುಂತಾದ ಪ್ರಾಚೀನ ಸಂಗೀತ ಪ್ರಕಾರಗಳು ಕ್ರಮೇಣ ಇಂದಿನ ಸಂಗೀತದಲ್ಲಿ ಬಳಕೆಯಲ್ಲಿರುವ ವಿಭಿನ್ನ ಸಂಗೀತ ಪ್ರಕಾರಗಳಿಗೆ ಸ್ಥಳಾಂತರಗೊಂಡವು, ಆದರೂ ಪ್ರಾಚೀನ ಪ್ರಬಂಧಗಳ ಮೂಲ ಅಂಶಗಳು ಇನ್ನೂ ಆಧುನಿಕ ರೂಪಗಳಲ್ಲಿ ಉಳಿದಿವೆ. ಗೀತಂ, ಸುಲಾಡಿ, ಎಸ್.ಎಸ್.ವರಜತಿ, ಜತಿಸ್ವರಂ, ವರ್ಣಂ, ಕೀರ್ತನಂ, ಕೃತಿ, ಪಾಡಾ, ಜವಾಲಿ ಅಥವಾ ಜಾವಳಿ, ತಿಲ್ಲಾನಾ, ಪಲ್ಲವಿ, ತನಮ್ ಈ ಸಂಗೀತ ಪ್ರಕಾರಗಳು ಭಾರತೀಯ ಸಂಗೀತ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ.

**ಕರ್ನಾಟಕದ ವಾಗ್ಗೇಯ ಪರಂಪರೆ:** ತಮಿಳುನಾಡಿನ ಹಲವು ವಾಗ್ಗೇಯಕಾರರು ನಮಗೆ ಗೊತ್ತು. ಆದರೆ, ಅದೇ ತಲೆಮಾರಿನ ನಮ್ಮ ನಾಡಿನ ಎಷ್ಟೋ ವಾಗ್ಗೇಯಕಾರರ ಹೆಸರೂ ಗೊತ್ತಿಲ್ಲ. ಅವರ ರಚನೆಗಳ ಪರಿಚಯವೂ ಇಲ್ಲ. ಈ ಬಗ್ಗೆ ಬೆಳಕು ಚೆಲ್ಲುವ ವಿಶೇಷ ಲೇಖನವನ್ನು ಕೆಲವು ಮೂಲಗಳಿಂದ ಪ್ರಸ್ತುತಪಡಿಸಲಾಗಿದೆ.

ಕರ್ನಾಟಕ ಸಂಗೀತ ಪ್ರಕಾರವು ಭಾರತೀಯ ಸಂಗೀತ ಎಂಬ ಪ್ರಾಚೀನ ಪರಂಪರೆಯಿಂದ ಬೇರ್ಪಡೆಯಾಗಿ ಸ್ವತಂತ್ರ ರೂಪ ಪಡೆದುಕೊಂಡು ಪ್ರಸಿದ್ಧಿಗೆ ಬಂದದ್ದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ. ಪರ್ಷಿಯನ್ ಹಾಗೂ ಮೊಘಲರ ಆಕ್ರಮಣದ ನಂತರ ಅವರ ಸಂಗೀತದ ಪ್ರಭಾವ ಹೆಚ್ಚಾಗಿ ಉತ್ತರಾದಿ ಅಥವಾ ಹಿಂದೂಸ್ಥಾನಿ ಸಂಗೀತ ಪ್ರಕಾರವಾಗಿ ಹೇಗೆ ಬೆಳೆಯಿತೋ, ಅಂತೆಯೇ ದಕ್ಷಿಣದಲ್ಲಿ ಆ ಅಖಂಡ ಭಾರತೀಯ ಸಂಗೀತವು ಕರ್ನಾಟಕ ಸಂಗೀತವಾಗಿ ಪುರಂದರ ದಾಸರ ಕಾಲದಿಂದ ಈಚೆಗೆ ಒಂದು ಸ್ವರೂಪ ಪಡೆದುಕೊಂಡಿರಬೇಕು. ಶಾಸ್ತ್ರಗ್ರಂಥ ಗಳಲ್ಲಿ ಬಹಳ ಹಿಂದಿನಿಂದಲೂ 'ಕರ್ನಾಟಕ ಸಂಗೀತ' ಎಂಬ ಪದಬಳಕೆಯಿದ್ದರೂ ಅದು ಅಭ್ಯಾಸ–ರೂಢಿಕ್ರಮದಲ್ಲಿ ಉಪಯೋಗಕ್ಕೆ ಪ್ರಾಯಶಃ ಈ ಸಮಯದಲ್ಲಿಯೇ ಬಂದಿರಬೇಕು.

ಆಗ ಈ ಸಂಗೀತವನ್ನು ಬೆಳೆಸಿದವರಲ್ಲಿ ಪ್ರಮುಖರಾದ ಪುರಂದರದಾಸರು 'ಕರ್ನಾಟಕ ಸಂಗೀತ ಪಿತಾಮಹ' ಎಂದೇ ಹೆಸರಾದರು. ಅವರು ಲಕ್ಷಾಂತರ ರಚನೆಗಳನ್ನು ಮಾಡಿದ್ದರೆಂದೂ, ನಮ್ಮ ಸಂಗೀತದ ಕಲಿಕಾ ಪಾಠ, ಸೂಳಾದಿ ಸಪ್ತ ತಾಳಗಳ ಬಳಕೆಯ ರಚನೆಗಳನ್ನು ಮಾಡಿದ್ದರೆಂದೂ ತಿಳಿದಿದೆ. ಅವರ ವಾಗ್ಗೇಯತ್ವದಲ್ಲಿ ಮೂಡಿದ ನಾಲ್ಕುಮುಕ್ಕಾಲು ಲಕ್ಷ ರಚನೆಗಳಲ್ಲಿ ಕೇವಲ ಏಳುನೂರು ರಚನೆಗಳಷ್ಟು ಮಾತ್ರ ದೊರಕಿವೆ. ಮಿಕ್ಕವು ಕಾಲಕ್ರಮೇಣ ನಾಶವಾಗಿವೆ.

(ಮುಂದಿನ ಸಂಚಿಕೆಗೆ)

# ಪಶ್ಚಿಮ ಘಟ್ಟಗಳ ಸಂರಕ್ಷಣೆ: ಪ್ರಗತಿ ಮುಖ್ಯವೋ ಪ್ರಕೃತಿ ಮುಖ್ಯವೋ?

*ಯುನೆಸ್ಕೋದ ವಿಶ್ವ ಪಾರಂಪಾರಿಕ ತಾಣಗಳ ಪಟ್ಟಿಯಲ್ಲಿ ಮಹತ್ವದ ಸ್ಥಾನ ಪಡೆದಿರುವ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಭಿವೃದ್ಧಿ ಮುಖ್ಯವೋ ಅಥವಾ ಪರಿಸರ ಸಂರಕ್ಷಣೆಗೆ ಮುಖ್ಯವೋ ಎಂಬ ಸಂದಿಗ್ಧ ಪ್ರಶ್ನೆ ಉದ್ಭವಿಸಿದೆ. ನಾಗಾಲೋಟದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಅಭಿವೃದ್ಧಿ ಅಗತ್ಯಗಳಿಗೆ ಅನುಗುಣವಾಗಿ ಪರಿಸರ ಸಂರಕ್ಷಣೆ ಮತ್ತು ವಾಣಿಜ್ಯ ಅವಕಾಶಗಳ ಆರ್ಥಿಕ ಅಭಿವೃದ್ಧಿಯ ನಡುವಿನ ಸೂಕ್ಷ್ಮ ಸಮತೋಲನವನ್ನು ಕಾಪಾಡಿಕೊಳ್ಳಬೇಕಿದೆ. ಸುಸ್ಥಿರ ಅಭಿವೃದ್ಧಿಯ ಗುರಿಗಳೊಂದಿಗೆ ಪಶ್ಚಿಮ ಘಟ್ಟಗಳನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳಬೇಕಿದೆ. ಇದು ಸರ್ಕಾರ, ಜನಪ್ರತಿನಿಧಿಗಳು, ಪರಿಸರವಾದಿಗಳು, ಪರಿಸರ ಸಂರಕ್ಷಣಾ ಸಂಸ್ಥೆಗಳು, ಜೀವ ವಿಜ್ಞಾನಿಗಳ ಆದ್ಯ ಕರ್ತವ್ಯವೂ ಆಗಿದೆ.*



**ಹಿ**ಮಾಲಯ ಪರ್ವತ ಶ್ರೇಣಿಗಿಂತ ಪ್ರಾಚೀನವಾದ ರಮ್ಯ ನಿಸರ್ಗ ಸೊಬಗಿನ ಮತ್ತು ವೈವಿಧ್ಯಮಯ ಜೀವ ವೈವಿಧ್ಯತೆಯ ಪಶ್ಚಿಮ ಘಟ್ಟಗಳು ಜಾಗತಿಕ ಪ್ರಾಮುಖ್ಯತೆಯ ಭೂದೃಶ್ಯದ ನಯನಮನೋಹರ ಮತ್ತು ರುದ್ರರಮಣೀಯ ವಿಸ್ಮಯ ತಾಣ. ಸಹ್ಯಾದ್ರಿ ಬೆಟ್ಟಗಳು ಎಂದೂ ಕರೆಯಲಾಗುವ ಪಶ್ಚಿಮ ಘಟ್ಟಗಳು ಗುಜರಾತಿನ ತಪತಿ ನದಿಯಿಂದ ತಮಿಳುನಾಡಿನ ನೀಲಗಿರಿ ಬೆಟ್ಟಗಳವರೆಗೂ ಹಬ್ಬಿಕೊಂಡಿವೆ. ಪಶ್ಚಿಮ ಘಟ್ಟ ವಿಶಾಲ ಪ್ರದೇಶವು ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಒಟ್ಟು 1,600 ಕಿ.ಮೀ ವ್ಯಾಪ್ತಿಸಿಕೊಂಡಿದೆ. ಈ ಸಹ್ಯಾದ್ರಿ ಬೆಟ್ಟಗಳ ಸಾಲು ಯುನೆಸ್ಕೋ ವಿಶ್ವ ಪಾರಂಪರಿಕ ಪಟ್ಟಿಯಲ್ಲೂ ಮಹತ್ವದ ಸ್ಥಾನ ಪಡೆದಿದೆ.

ಆಗ್ನೇಯ ಮುಂಗಾರು ಮಾರುತಗಳಿಗೆ ಸ್ವಾಭಾವಿಕ ತಡೆಗೋಡೆಗಳಾಗಿರುವ ಈ ಪಶ್ಚಿಮ ಘಟ್ಟವು ದಕ್ಷಿಣ ಭಾರತದ ಬಹುತೇಕ ನದಿಗಳ ಜಲಮೂಲವ ಆಗಿದ್ದು, ಸಸ್ಯ ಮತ್ತು ಪ್ರಾಣಿಗಳ ಅಗಾಧ ಜೀವವೈವಿಧ್ಯತೆಯನ್ನು ಹೊಂದಿದೆ. 5,000ಕ್ಕೂ ಹೆಚ್ಚು ಪ್ರಭೇದದ ಸಸ್ಯ ಸಂಕುಲಗಳು, 139 ಸಸ್ತನಿಗಳು, 508 ಪಕ್ಷಿಗಳು ಮತ್ತು 179 ಉಭಯಚರ ಪ್ರಭೇದಗಳು ಹಾಗೂ 650 ಜಾತಿಯ ವೃಕ್ಷಗಳ ನೆಲೆಯಾಗಿದೆ. ಲಾಂಗೂರ್, ಸಿಂಹ ಬಾಲದ ಸಿಂಗಳಿಕ, ನೀಲಗಿರಿ ತಾಹರ್ ಮುಂತಾದ ಹಲವಾರು ಅಳಿವಿನಂಚಿನಲ್ಲಿರುವ ಪ್ರಾಣಿಪ್ರಭೇದಗಳಿಗೆ ಪಶ್ಚಿಮ ಘಟ್ಟಗಳು ನೆಲೆಯಾಗಿವೆ. ಪಶ್ಚಿಮ ಘಟ್ಟಗಳನ್ನು ಭಾರತದ ಮಹಾ ಇಳಿಜಾರು ಅಥವಾ ಎತ್ತರದ ಶಿಖರ ತಾಣ ಎಂದೂ ಸಹ ಕರೆಯಲಾಗುತ್ತದೆ.

**ಪಶ್ಚಿಮ ಘಟ್ಟಗಳ ಪರಿಸರಕ್ಕೆ ಧಕ್ಕೆ :** ಮಾನವನ ಅಭಿವೃದ್ಧಿ ಚಟುವಟಿಕೆಗಳು ಮತ್ತು ಜನಸಂಖ್ಯೆ ಹೆಚ್ಚಳವು ಪಶ್ಚಿಮ ಘಟ್ಟಗಳ ಸಂಪನ್ಮೂಲಗಳನ್ನು ಬರಿದು ಮಾಡುತ್ತಿವೆ. ಮರಗಳ ಹನನ, ನಗರೀಕರಣ, ಪ್ರವಾಸೋದ್ಯಮ, ಅತಿಕ್ರಮಣ, ಅಣೆಕಟ್ಟುಗಳ ನಿರ್ಮಾಣ, ಜಲ ಹಾಗೂ ಉಷ್ಣ ವಿದ್ಯುತ್ ಸ್ಥಾವರಗಳ ನಿರ್ಮಾಣ, ಗಣಿಗಾರಿಕೆ, ಜೀವ ವೈವಿಧ್ಯದ ನಷ್ಟ–ಸಂಕಷ್ಟಕ್ಕೆ ಕಾರಣವಾಗುವಂತಹ ಮೂಲ ಸೌಕರ್ಯಗಳ ಅಭಿವೃದ್ಧಿ ಇತ್ಯಾದಿಗಳು ಪಶ್ಚಿಮ ಘಟ್ಟಗಳು ನಶಿಸುವಂತೆ ಮಾಡುತ್ತಿವೆ. ಈ ಎಲ್ಲ ಕಾರಣಗಳಿಂದ ಘಟ್ಟ ಪ್ರದೇಶಕ್ಕೆ ಹಿಂದೆಂದಿಗಿಂತಲೂ ದೊಡ್ಡ ಮಟ್ಟದಲ್ಲಿ ಅಪಾಯಗಳು ಎದುರಾಗಿವೆ.

ಪಶ್ಚಿಮ ಘಟ್ಟಗಳಲ್ಲಿ ಪ್ರಸ್ತುತ, ಕೇವಲ ಶೇಕಡ 6.8ರಷ್ಟು ಮೂಲ ಅರಣ್ಯ ಮಾತ್ರವೇ ಅಸ್ತಿತ್ವದಲ್ಲಿವೆ. ಉಳಿದ ಕಾನನ ಪ್ರದೇಶ ನಶಿಸಿ ಹೋಗಿದೆ. ಕೇಂದ್ರ ಸರ್ಕಾವು ಪರಸರ ವಿಜ್ಞಾನಿ ಮಾಧವ್ ಗಾಡ್ಗೀಲ್ ಅವರ ನೇತೃತ್ವದಲ್ಲಿ 2011ರಲ್ಲಿ ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ಕಾರ್ಯಸೂಚಿಗಳನ್ನು ರಚಿಸಲು ಸಮಿತಿ ರಚನೆ ಮಾಡಿತ್ತು. ಇದನ್ನು ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿ ಎಂದು ಕರೆಯಲಾಗಿತ್ತು.

**ಸಮಿತಿಯು ನೀಡಿದ ವರದಿಯಲ್ಲಿ ಹಲವು ಶಿಫಾರಸುಗಳಿದ್ದವು. ಅವುಗಳೆಂದರೆ:** ಪಶ್ಚಿಮ ಘಟ್ಟಗಳನ್ನು ಸಂಪೂರ್ಣವಾಗಿ ಪರಿಸರ ಸೂಕ್ಷ್ಮ ವಲಯಗಳೆಂದು ಗುರುತಿಸಬೇಕು (ಇದನ್ನು ಅತಿ ಹೆಚ್ಚು ಸುರಕ್ಷಿತ, ಹೆಚ್ಚು ಸುರಕ್ಷಿತ, ಮತ್ತು ಮಧ್ಯಮ ಸುರಕ್ಷಿತ ಎಂದು ಮೂರು ವರ್ಗಗಳಾಗಿ ವಿಂಗಡಿಸಬೇಕು. ಅಲ್ಲಿ ಸೀಮಿತ ಅಭಿವೃದ್ಧಿಗೆ ಮಾತ್ರ ಅನುಮತಿ ನೀಡಬೇಕು); ಪರಿಸರ ಶ್ರೀಮಂತಿಕೆ ಮತ್ತು ಭೂಮಿಯ ಬಳಕೆಯ ಪ್ರಮಾಣವನ್ನು ಆಧರಿಸಿ ಕಲ್ಲು ಗಣಿಗಾರಿಕೆ ಸೇರಿದಂತೆ ಎಲ್ಲ ಗಣಿಗಾರಿಕೆ, ಉಷ್ಣ ವಿದ್ಯುತ್ ಸ್ಥಾವರಗಳು, ಅಣೆಕಟ್ಟುಗಳ ನಿರ್ಮಾಣ, ಮರಳು ಗಣಿಗಾರಿಕೆ ಮತ್ತು 20,000 ಚ.ಮೀ ಗಿಂತ ಹೆಚ್ಚಿನ ಕಟ್ಟಡ ನಿರ್ಮಾಣವನ್ನು ನಿಷೇಧಿಸಬೇಕು ಎಂಬುದು ಪ್ರಮುಖ ಶಿಫಾರಸುಗಳಾಗಿವೆ.

ಅಲ್ಲದೇ, ಜಲ ವಿದ್ಯುತ್ ಯೋಜನೆಯ ಸಂದರ್ಭದಲ್ಲಿ ನದಿಯಲ್ಲಿ ಸಾಕಷ್ಟು ನೀರಿನ ಹರಿವು ಮತ್ತು ಬೇರೆ ಯೋಜನೆಗಳ ನಡುವಿನ ಅಂತರವನ್ನು ಪರಿಗಣಿಸಬೇಕು; ಕೃಷಿ ಪ್ರದೇಶಗಳಲ್ಲಿ ಕೀಟನಾಶಕಗಳ ಬಳಕೆ ಮತ್ತು ಮಾರ್ಪಡಿಸಿದ ತಳಿಗಳ ಬೆಳೆಗಳನ್ನೂ ಸಹಾ ನಿಷೇಧಿಸಬೇಕು ಹಾಗೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳಲು ಗ್ರಾಮಸಭೆಗೆ ಜವಾಬ್ದಾರಿ ನೀಡಬೇಕು ಎಂಬುದು ಇತರ ಶಿಫಾರಸುಗಳಾಗಿವೆ.

ಈ ಮಾಧವ್ ಗಾಡ್ಗೀಲ್ ವರದಿಯ ವಿರುದ್ಧವಾಗಿ ಕೈಗಾರಿಕಾ ಲಾಬಿಯು ಪ್ರತಿಭಟನೆ ನಡೆಸಿತು. ಪರಿಣಾಮವಾಗಿ, ವಿವಿಧ ರಾಜ್ಯಗಳು ಗಾಡ್ಗೀಲ್ ವರದಿಯನ್ನು ಜಾರಿಗೆ ತರುವುದನ್ನು ಮುಂದೂಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದವು. ನಂತರ ಕೇಂದ್ರ ಸರ್ಕಾರವು ಕಸ್ತೂರಿ ರಂಗನ್ ನೇತೃತ್ವದಲ್ಲಿ 2013ರಲ್ಲಿ ಮತ್ತೊಂದು ಸಮಿತಿಯನ್ನು ನೇಮಕ ಮಾಡಿ ಪಶ್ಚಿಮ ಘಟ್ಟಗಳ ಬಗ್ಗೆ ಸಮಗ್ರ ವರದಿ ನೀಡುವಂತೆ ಹೇಳಿತು.

ಕಸ್ತೂರಿ ರಂಗನ್ ಸಮಿತಿಯು ಗಾಡ್ಗೀಲ್ ವರದಿ ಹೇಳಿದ್ದ ಪಶ್ಚಿಮ ಘಟ್ಟಗಳ ಒಟ್ಟು ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಪರಿಗಣಿಸುವುದಕ್ಕೆ ಬದಲಾಗಿ, ಕೇವಲ ಶೇ.37ರಷ್ಟು ಪ್ರದೇಶವನ್ನು ಮಾತ್ರ ಪರಿಸರ ಸೂಕ್ಷ್ಮ ಪ್ರದೇಶ ಎಂದು ಕರೆಯುವಂತೆ ಹೇಳಿತು. ಈ ಶೇ.37ರಷ್ಟು ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಮಾತ್ರ ಗಣಿಗಾರಿಕೆಯನ್ನು ನಿಷೇಧ ಮಾಡಬೇಕು. ವಿವರವಾದ ಅಧ್ಯಯನದ ನಂತರವೇ ಜಲ ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಬೇಕೆಂದು ಸೂಚಿಸಿತು. ಪಶ್ಚಿಮ ಘಟ್ಟಗಳ ಕೇಂದ್ರ ಪ್ರಾಧಿಕಾರದ ಬದಲಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಮತ್ತು ರಾಜ್ಯ ಜೀವ ವೈವಿಧ್ಯ ಮಂಡಳಿಗಳಿಂದ ಕಾನೂನು ಚೌಕಟ್ಟನ್ನು ಬಲಪಡಿಸುವಂತೆ ಹೇಳಿತು.

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು 2022 ಜುಲೈ ತಿಂಗಳಿನಲ್ಲಿ ಕಸ್ತೂರಿ ರಂಗನ್ ವರದಿ ಜಾರಿ ಸಂಬಂಧ ಕರಡು ಅಧಿಸೂಚನೆ ಹೊರಡಿಸಿದೆ. ಆದರೆ, ಕರ್ನಾಟಕದಲ್ಲಿನ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಸ್ತೂರಿ ರಂಗನ್ ವರದಿ ಜಾರಿಗೆ ವಿರೋಧ ವ್ಯಕ್ತಪಡಿಸಿದ್ದರು. ಕೇರಳ ಮತ್ತು ಗೋವಾ ರಾಜ್ಯಗಳೂ ಕೂಡ ಕಸ್ತೂರಿ ರಂಗನ್ ವರದಿಯನ್ನು ತೀವ್ರವಾಗಿ ವಿರೋಧಿಸಿದವು. ಪ್ರಸ್ತುತ, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕೂಡ ಕಸ್ತೂರಿ ರಂಗನ್ ವರದಿಯನ್ನು ಅನುಷ್ಠಾನಗೊಳಿಸದಿರಲು ನಿರ್ಣಯ ಕೈಗೊಂಡಿದೆ. ಉದ್ಯಮಿಗಳ ಮತ್ತು ಸರ್ಕಾರಗಳ ಸ್ವಾರ್ಥದಿಂದಾಗಿ ಪರಿಸರ ಸಂರಕ್ಷಣೆಯ ಈ ಎರಡೂ ವರದಿಗಳು ಹಳ್ಳ ಹಿಡಿದವು.

**ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಏನು ಮಾಡಬೇಕು?**

ವಿಶ್ವವು ತೀವ್ರವಾದ ಹವಾಮಾನ ಬಿಕ್ಕಟ್ಟನ್ನು ಎದುರಿಸುತ್ತಿರಬೇಕಾದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶೇಷವಾಗಿ ಪರಿಸರ ವ್ಯವಸ್ಥೆಯನ್ನು ನಾಶಪಡಿಸುವ ಅಪಾಯಗಳನ್ನು ಗುರುತಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ರಾಜ್ಯ ಸರ್ಕಾರಗಳು ಅಭಿವೃದ್ಧಿ ಮತ್ತು ಪ್ರವಾಸೋದ್ಯಮದ ಹೆಸರಿನಲ್ಲಿ ಅವೈಜ್ಞಾನಿಕವಾಗಿ ನಡೆಸುವ ನಿರ್ಮಾಣ ಕೆಲಸಗಳನ್ನು ನಿಯಂತ್ರಿಸಲು ಸೂಕ್ತವಾದ ಕಾನೂನು ರೂಪಿಸಬೇಕು. ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

ಯುನೆಸ್ಕೋದ ವಿಶ್ವ ಪಾರಂಪಾರಿಕ ತಾಣಗಳ ಪಟ್ಟಿಯಲ್ಲಿ ಮಹತ್ವದ ಸ್ಥಾನ ಪಡೆದಿರುವ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಭಿವೃದ್ಧಿ ಮುಖ್ಯವೋ ಅಥವಾ ಪರಿಸರ ಸಂರಕ್ಷಣೆಗೆ ಮುಖ್ಯವೋ ಎಂಬ ಸಂದಿಗ್ಧ ಪ್ರಶ್ನೆ ಉದ್ಭವಿಸಿದೆ. ನಾಗಾಲೋಟದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಅಭಿವೃದ್ಧಿ ಅಗತ್ಯಗಳಿಗೆ ಅನುಗುಣವಾಗಿ ಪರಿಸರ ಸಂರಕ್ಷಣೆ ಮತ್ತು ವಾಣಿಜ್ಯ ಅವಕಾಶಗಳ ಆರ್ಥಿಕ ಅಭಿವೃದ್ಧಿಯ ನಡುವಿನ ಸೂಕ್ಷ್ಮ ಸಮತೋಲನ ವನ್ನು ಕಾಪಾಡಿಕೊಳ್ಳಬೇಕಿದೆ. ಸುಸ್ಥಿರ ಅಭಿವೃದ್ಧಿಯ ಗುರಿಗಳೊಂದಿಗೆ ಪಶ್ಚಿಮ ಘಟ್ಟಗಳನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳಬೇಕಿದೆ. ಇದು ಸರ್ಕಾರ, ಜನಪ್ರತಿನಿಧಿಗಳು, ಪರಿಸರವಾದಿಗಳು, ಪರಿಸರ ಸಂರಕ್ಷಣಾ ಸಂಸ್ಥೆಗಳು, ಜೀವವಿಜ್ಞಾನಿಗಳ ಆದ್ಯ ಕರ್ತವ್ಯವೂ ಆಗಿದೆ.

## ಜೀವವೈವಿಧ್ಯತೆಯ ರಮ್ಯ ತಾಣ

*ಪಶ್ಚಿಮ ಘಟ್ಟಗಳು ಅಸಾಧಾರಣವಾದ ಉನ್ನತ ಮಟ್ಟದ ಜೈವಿಕ ವೈವಿಧ್ಯತೆಯ ವಿಶ್ವದ ಎಂಟು 'ಅತ್ಯಂತ ಹಾಟ್‌ಸ್ಪಾಟ್'ಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ. ಈ ಸ್ಥಳದ ಕಾಡುಗಳು ಸಮಭಾಜಕವಲ್ಲದ ಉಷ್ಣವಲಯದ ನಿತ್ಯಹರಿದ್ವರ್ಣ ಅರಣ್ಯಗಳನ್ನೂ ಒಳಗೊಂಡಿವೆ. ಜಾಗತಿಕವಾಗಿ ಕನಿಷ್ಠ 325 ಅಳಿವಿನಂಚಿನಲ್ಲಿರುವ ಸಸ್ಯ, ಪ್ರಾಣಿ, ಪಕ್ಷಿಗಳು, ಉಭಯಚರ ಜೀವಿಗಳು ಮತ್ತು ಮತ್ಸ್ಯ ಪ್ರಭೇದಗಳಿಗೆ ಈ ಭವ್ಯ ಪರಿಸರ ನೆಲೆಯಾಗಿದೆ.*

*ಪಶ್ಚಿಮ ಘಟ್ಟಗಳಲ್ಲಿನ ಜಾಗತಿಕವಾಗಿ ಅಳಿವಿನಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿಗಳನ್ನು 229 ಸಸ್ಯ ಪ್ರಭೇದಗಳು, 31 ಸಸ್ತನಿಗಳು, 15 ಪಕ್ಷಿಗಳು, 43 ಉಭಯಚರಗಳು, 5 ಸರೀಸೃಪಗಳು ಮತ್ತು ಒಂದ ಮೀನು ಪ್ರಭೇದಗಳು ಪ್ರತಿನಿಧಿಸುತ್ತವೆ. ಪಶ್ಚಿಮ ಘಟ್ಟಗಳಲ್ಲಿ ಜಾಗತಿಕವಾಗಿ ಅಳಿವಿನಂಚಿನಲ್ಲಿರುವ ಒಟ್ಟು 325 ಪ್ರಭೇದಗಳಲ್ಲಿ, 129 ದುರ್ಬಲ ಪ್ರಭೇದಗಳು, 145 ಅಳಿವಿನಂಚಿನಲ್ಲಿರುವ ಪ್ರಭೇದಗಳು ಮತ್ತು 51 ತೀವ್ರವಾಗಿ ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ವರ್ಗೀಕರಿಸಲಾಗಿದೆ.*

*ಪಶ್ಚಿಮ ಘಟ್ಟಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಜೈವಿಕ ವೈವಿಧ್ಯತೆಯ ಸಂರಕ್ಷಣೆಗಾಗಿ ಅಪಾರ ಜಾಗತಿಕ ಪ್ರಾಮುಖ್ಯತೆಯ ಪ್ರದೇಶವೆಂದು ಗುರುತಿಸಲ್ಪಟ್ಟಿವೆ. ಜೊತೆಗೆ ಹೆಚ್ಚಿನ ಭೌಗೋಳಿಕ, ಸಾಂಸ್ಕೃತಿಕ ಮತ್ತು ಸೌಂದರ್ಯದ ಮೌಲ್ಯಗಳನ್ನು ಹೊಂದಿವೆ. ಭಾರತದ ಪಶ್ಚಿಮ ಕರಾವಳಿಗೆ ಸಮಾನಾಂತರವಾಗಿ ಭವ್ಯವಾಗಿ ತಲೆಎತ್ತಿರುವ ಪರ್ವತಗಳ ಸ್ತೋಮಗಳು, ಸರಿಸುಮಾರು ಸುಮಾರು 50 ಕಿ.ಮೀ ಒಳನಾಡಿನ ಘಟ್ಟಗಳು, ಕೇರಳ, ತಮಿಳುನಾಡು, ಕರ್ನಾಟಕ, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳನ್ನು ವ್ಯಾಪಿಸಿರುವ ಇದರ ರಮ್ಯತೆಗೆ ಸಾಕ್ಷಿ. ಈ ಪರ್ವತಗಳು 1,600 ಕಿ.ಮೀ. ಉದ್ದದ ಪ್ರದೇಶದಲ್ಲಿ ಸುಮಾರು 1,40,000 ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿವೆ,*

***ಪರಿಸರ ಕಾರ್ಯಕರ್ತರ ಕಳವಳ:*** *ಪಶ್ಚಿಮ ಘಟ್ಟವು ಪ್ರಪಂಚದ ಪ್ರಮುಖ ಜೀವವೈವಿಧ್ಯ ಹಾಟ್‌ಸ್ಪಾಟ್‌ಗಳಲ್ಲಿ ಒಂದು. ಇಲ್ಲಿ ಅಭಿವೃದ್ಧಿ ಕಾಮಗಾರಿ ಹಮ್ಮಿಕೊಳ್ಳುವುದರಿಂದ ವನ್ಯಜೀವಿಗಳ ಆವಾಸ ಸ್ಥಾನಕ್ಕೆ ಕುತ್ತು ಉಂಟಾಗುತ್ತದೆ. ಹೆದ್ದಾರಿ ನಿರ್ಮಾಣ, ನೀರಾವರಿ ಯೋಜನೆಗಳು, ವಿದ್ಯುತ್ ಮಾರ್ಗ, ತೈಲ ಸಾಗಿಸುವ ಕೊಳವೆ ಮಾರ್ಗಗಳ ಅಳವಡಿಕೆಗಾಗಿ ಜಲವಿದ್ಯುತ್ ಯೋಜನೆಗಳಿಗಾಗಿ ಪಶ್ಚಿಮ ಘಟ್ಟದ ಅನೇಕ ಕಡೆ ಅರಣ್ಯ ಈಗಾಗಲೇ ನಾಶವಾಗಿದೆ. ಇದರ ಪರಿಣಾಮವಾಗಿ ನಾಲ್ಕೈದು ವರ್ಷಗಳಲ್ಲಿ ಭಾರಿ ಪ್ರಮಾಣದ ಭೂ ಕುಸಿತಗಳು ಪಶ್ಚಿಮ ಘಟ್ಟದ ಉದ್ದಕ್ಕೂ ಪದೇ ಪದೇ ಸಂಭವಿಸಿವೆ. ಹಾಗಾಗಿ ಈ ಪಶ್ಚಿಮ ಘಟ್ಟದಲ್ಲಿ ಘಾಟಿಗಳಲ್ಲಿ ಹೆದ್ದಾರಿ ಅಭಿವೃದ್ಧಿಯ ನೆಪದಲ್ಲಿ ಪರಿಸರಕ್ಕೆ ಮತ್ತಷ್ಟು ಹಾನಿಯನ್ನುಂಟು ಮಾಡಬಾರದು ಎಂಬುದು ಪರಿಸರ ಕಾರ್ಯಕರ್ತರ ಕಳಕಳಿ. ಜೀವ ವಿಜ್ಞಾನಿಗಳೂ ಇದಕ್ಕೆ ದನಿಗೂಡಿಗೂಡಿಸುತ್ತಾರೆ.*

*ಜೀವವೈವಿಧ್ಯ ಹಾಗೂ ಪರಿಸರ ವ್ಯವಸ್ಥೆಯ ಸಂರಕ್ಷಣೆ ದೃಷ್ಟಿಯಿಂದ ಪಶ್ಚಿಮ ಘಟ್ಟದಲ್ಲಿ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳದಿರುವುದು ಸೂಕ್ತ. ಪಶ್ಚಿಮಘಟ್ಟಗಳಂತಹ ಸೂಕ್ಷ್ಮ ಪ್ರದೇಶದಲ್ಲಿ ಸುರಂಗ ನಿರ್ಮಿಸಿ ಭಾರಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡರೆ ಒಂದಿಲ್ಲ ಒಂದು ದಿನ ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಜೀವವಿಜ್ಞಾನಿಗಳು ಗಂಭೀರ ಎಚ್ಚರಿಕೆಯನ್ನೂ ನೀಡಿದ್ದಾರೆ.*

*ಈಗ ಎಲ್ಲದಕ್ಕೂ ತಂತ್ರಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳಬಹುದು. ವಾಣಿಜ್ಯ ಅವಕಾಶಗಳಿಗೆ ಕಾರಣವಾಗುವ ಸುರಂಗ ಮಾರ್ಗ ನಿರ್ಮಾಣ ಸೇರಿದಂತೆ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಾಗ ನಿರ್ಮಿಸುವಾಗ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವ ಮೂಲಕ ಪರಿಸರದ ಮೇಲಾಗುವ ದುಷ್ಪರಿಣಾಮವನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು. ಸುರಂಗ ನಿರ್ಮಾಣಕ್ಕೆ ಸುಧಾರಿತ ತಂತ್ರಜ್ಞಾನ ಬಳಸಿದರೆ ಭವಿಷ್ಯದಲ್ಲೂ ಯಾವುದೇ ಅಪಾಯ ಸಂಭವಿಸುವ ಸಾಧ್ಯತೆ ಕಡಿಮೆ ಎಂದು ತಂತ್ರಜ್ಞರು ಹೇಳುತ್ತಾರೆ.*

# ಬೆಂಗಳೂರು ಯೂನಿವರ್ಸಿಟಿ: ಏಷ್ಯಾದ ಅತ್ಯುತ್ತಮ ವಿಶ್ವವಿದ್ಯಾಲಯ




***ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯದ ಅತಿದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. 1964ರಲ್ಲಿ 32 ಕಾಲೇಜುಗಳು ಮತ್ತು 16,000 ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾಯಿತು. ನಂತರ 700 ಕಾಲೇಜುಗಳು ಮತ್ತು 4 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ್ದು, ಇದು ಬೆಂಗಳೂರು ನಗರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳನ್ನು ಒಳಗೊಂಡಿದೆ. ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯ ಕ್ಯಾಂಪಸ್ ಜ್ಞಾನಭಾರತಿ ಆಗಿದೆ. ಇಲ್ಲಿ 800 ಎಕರೆ ವಿಶಾಲ ಪ್ರದೇಶವಿದೆ. ವಿಶ್ವವಿದ್ಯಾಲಯವು ತನ್ನ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್ ಅನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳ ಅಧ್ಯಾಪಕರ ಮತ್ತು ಪೋಷಕರ ಮನಗೆಲ್ಲುವಲ್ಲಿ ಸಾಧನೆ ಮಾಡಿದೆ.***

** **ಬೆಂಗಳೂರು ವಿಶ್ವವಿದ್ಯಾಲಯ (ಬೆಂ.ವಿವಿ):** ಜುಲೈ 1964ರಲ್ಲಿ ಸ್ಥಾಪನೆಯಾದ ಇದು ಮೂಲ ವಿಶ್ವವಿದ್ಯಾಲಯವಾಗಿದ್ದು, ಇದು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯೂನಿವರ್ಸಿಟಿ ಗ್ರಾಂಟ್ ಕಮಿಷನ್–ಯುಜಿಸಿ)ನಿಂದ ಮಾನ್ಯತೆ ಪಡೆದಿದೆ.*

** **ಬೆಂಗಳೂರು ಸಿಟಿ ವಿಶ್ವವಿದ್ಯಾಲಯ (ಬಿಸಿಯು):** ಈ ಹಿಂದೆ ಬೆಂಗಳೂರು ಸೆಂಟ್ರಲ್ ವಿಶ್ವವಿದ್ಯಾಲಯ ಎಂದು ಕರೆಯಲ್ಪಡುತ್ತಿತ್ತು, ಇದನ್ನು 2017ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ತ್ರಿವಿಭಜನೆಯ ನಂತರ ಸ್ಥಾಪಿಸಲಾಯಿತು. ಇದು ಕೂಡ UGC ನಿಂದ ಮಾನ್ಯತೆ ಪಡೆದಿದೆ.*

** **ಬೆಂಗಳೂರು ಉತ್ತರ ವಿಶ್ವವಿದ್ಯಾಲಯ (ಬಿಎನ್‌ಯು):** ಇದು ಕೂಡ ತ್ರಿವಿಭಜನೆಯ ನಂತರ 2017 ರಲ್ಲಿ ಸ್ಥಾಪನೆಯಾಯಿತು. ಇದು ಬೆಂಗಳೂರಿನ ಉತ್ತರ ಜಿಲ್ಲೆ, ಗ್ರಾಮಾಂತರ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಶೈಕ್ಷಣಿಕ ಸೇವೆ ಸಲ್ಲಿಸುತ್ತದೆ. ಇದು UGC ನಿಂದ ಮಾನ್ಯತೆ ಪಡೆದಿದೆ.*

ರಾಷ್ಟ್ರ ನಿರ್ಮಾಣದ ನಿರಂತರ ಕಾರ್ಯದಲ್ಲಿ, ಬೆಂಗಳೂರು ವಿಶ್ವವಿದ್ಯಾ ನಿಲಯವು ಜ್ಞಾನ ಸೃಷ್ಟಿ ಮತ್ತು ಪ್ರಸರಣದ ಮೂಲಕ ಚೈತನ್ಯಶೀಲ ಮತ್ತು ನವ ಸಮಾಜಕ್ಕಾಗಿ ಉನ್ನತ ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಉತ್ತೇಜಿಸಲು ಅನನ್ಯ ಕೊಡುಗೆ ನೀಡುತ್ತಿದೆ. ಸೂಕ್ತ ರೀತಿಯ ಮಾನವ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ತನ್ನ ಕೊಡುಗೆಯನ್ನು ನೀಡಲು ಅದು ಕಂಕಣಬದ್ಧವಾಗಿದೆ. ರಾಷ್ಟ್ರೀಯ ಮತ್ತು ಜಾಗತಿಕ ಸವಾಲುಗಳನ್ನು ಎದುರಿಸಲು, ತನ್ನ ಧ್ಯೇಯವನ್ನು ಸಾಧಿಸಲು ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಮುಂಚೂಣಿಯಲ್ಲಿದೆ. ವಿದ್ಯಾರ್ಥಿಗಳಿಗೆ ಪದವಿಯು ಸಾಮರ್ಥ್ಯದ ಪ್ರಮಾಣೀಕರಣವನ್ನು ಪ್ರತಿನಿಧಿಸುತ್ತದೆ, ಹಾಗೂ ಮುಂದುವರಿದ ಶಿಕ್ಷಣ ಅಥವಾ ಲಾಭದಾಯಕ ಉದ್ಯೋಗ, ಜೀವನೋಪಾಯ ಮತ್ತು ಸಮೃದ್ಧಿಗೆ ರಹದಾರಿಯಾಗಿದೆ. ರಾಷ್ಟ್ರದ ಅಭಿವೃದ್ಧಿಯಲ್ಲಿ ಬೆಂಗಳೂರು ವಿವಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ

ಬೆಂಗಳೂರು ವಿಶ್ವವಿದ್ಯಾನಿಲಯವು 1964 ರಲ್ಲಿ ಕೇವಲ 32 ಕಾಲೇಜುಗಳು ಮತ್ತು 16,000 ವಿದ್ಯಾರ್ಥಿಗಳ ಜನಸಂಖ್ಯೆಯೊಂದಿಗೆ ಹುಟ್ಟಿಕೊಂಡಿತು. ಇಂದು, ಇದು ದೇಶ ಮತ್ತು ಏಷ್ಯಾದಲ್ಲಿ ಸುಮಾರು 700 ಸಂಯೋಜಿತ ಕಾಲೇಜುಗಳು ಮತ್ತು ಸುಮಾರು 4 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಹೊಂದಿರುವ ಅತಿ ದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿದೆ. ಇದು ಸುಮಾರು 75 ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನೀಡುವ ಸುಮಾರು 50 ಸ್ನಾತಕೋತ್ತರ ವಿಭಾಗಗಳನ್ನು ಹೊಂದಿದೆ. ವಿಶ್ವವಿದ್ಯಾನಿಲಯವು 6 ವಿಶೇಷ ಕೇಂದ್ರಗಳು ಮತ್ತು 3 ಸಂಯೋಜಿತ ಕಾರ್ಯಕ್ರಮಗಳನ್ನು ಹೊಂದಿದೆ. ಇದು 3 ವಿಶ್ವವಿದ್ಯಾಲಯ ಕಾಲೇಜು ಗಳನ್ನು ಸಹ ಹೊಂದಿದ್ದ ಯುವಿಸಿಇ, ವಿಶ್ವ ವಿದ್ಯಾಲಯ ಕಾನೂನು ಕಾಲೇಜು ಮತ್ತು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಕಾಲೇಜು. ಇದು ತನ್ನ ಫಲಪ್ರದ ಅಸ್ತಿತ್ವದ 50ನೇ ವರ್ಷವನ್ನು ಪೂರೈಸಿದೆ. ವಿಶ್ವವಿದ್ಯಾನಿಲಯವು ಪ್ರಾರಂಭದ ಸಮಯದಲ್ಲಿ ನಿಗದಿಪಡಿಸಿದ ಸಾಧಾರಣ ಗುರಿಗಿಂತ ಹೆಚ್ಚಿನದನ್ನು ಸಾಧಿಸಿದೆ ಎಂಬುದು ಹೆಮ್ಮೆಯ ಸಂಗತಿ.

ಬೆಂಗಳೂರು ವಿಶ್ವವಿದ್ಯಾನಿಲಯವು ತನ್ನ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಆಯ್ಕೆ ಆಧಾರಿತ ಕ್ರೆಡಿಟ್ ವ್ಯವಸ್ಥೆಯನ್ನು ಪರಿಚಯಿಸಿದೆ, ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಬಹು ಪದವಿ ಗಳೊಂದಿಗೆ ಬಹು ನಿರ್ಗಮನ ಆಯ್ಕೆಗಳು 2014–15 ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿವೆ. ವಿದ್ಯಾರ್ಥಿಗಳ ಬಹುಮುಖಿ ಅಭಿವೃದ್ಧಿಗಾಗಿ, ಪಠ್ಯಕ್ರಮವು ಹಲವಾರು ಕೋರ್ ಕೋರ್ಸ್‌ಗಳಲ್ಲಿ ಅವರ ಜ್ಞಾನವನ್ನು ಹೆಚ್ಚಿಸಲು ವ್ಯಾಪಕವಾದ ಕೋರ್ಸ್‌ಗಳ ಮೇಲೆ ಒತ್ತು ನೀಡುತ್ತದೆ.

ವಿಶ್ವವಿದ್ಯಾಲಯದ ಮೂಲಸೌಕರ್ಯವು ಸುಸಜ್ಜಿತ ಪ್ರಯೋಗಾಲಯಗಳು, ಹೆಚ್ಚು ಅರ್ಹ ಮತ್ತು ಪ್ರೇರಿತ ಅಧ್ಯಾಪಕರನ್ನು ಹೊಂದಿದ್ದು, 1974ರಲ್ಲಿ ಶ್ರೀ ಹೆಚ್.ನರಸಿಂಹಯ್ಯನವರ ಮಾರ್ಗದರ್ಶನದಲ್ಲಿ ಪ್ರಾರಂಭವಾದ ಜ್ಞಾನಬಾರತಿ ವಿವಿ ಕೇಂದ್ರ ಅಭಿವೃದ್ಧಿ ಹೊಂದಿ ಶಿಕ್ಷಣ ಮತ್ತು ಸಂಶೋಧನೆಯ ಕಾರಣಕ್ಕಾಗಿ ಬದ್ಧತೆ ಮತ್ತು ಸಮರ್ಪಣೆಯೊಂದಿಗೆ ಕೆಲಸ ಮಾಡುತ್ತಿರುತ್ತಾರೆ. ವಿವಿ ಅಧಿಕಾರಿಗಳು ಮತ್ತು ಬೋಧಕೇತರ ಸಿಬ್ಬಂದಿ ಸಮರ್ಪಣೆ ಮನೋಭಾವ ಮತ್ತು ಸೇವಾಬದ್ಧತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಸ್ನಾತಕೋತ್ತರ ವಿಭಾಗಗಳ ಸಂಶೋಧನಾ ಫಲಿತಾಂಶವು ಭಾರತ ಮತ್ತು ವಿದೇಶಗಳಲ್ಲಿನ ಉತ್ತಮ ಪ್ರಭಾವ ಅಂಶದ ನಿಯತಕಾಲಿಕಗಳಲ್ಲಿ ನೀಡಲಾಗುವ ಪಿಎಚ್‌ಡಿ ಪದವಿಗಳು ಮತ್ತು ಸಂಶೋಧನಾ ಪ್ರಕಟಣೆಗಳ ವಿಷಯದಲ್ಲಿ ಉತ್ತಮವಾಗಿದೆ, ಇತ್ತೀಚೆಗೆ 49ನೇ ಘಟಿಕೋತ್ಸವದಲ್ಲಿ 204 ಅಭ್ಯರ್ಥಿಗಳು ಪಿಎಚ್‌ಡಿ ಪದವಿಗಳನ್ನು ಪಡೆದು ವಿಶೇಷ ಗಮನ ಸೆಳೆದಿದ್ದಾರೆ.

*__2009:__ ಬೆಂಗಳೂರು ವಿಶ್ವವಿದ್ಯಾಲಯವನ್ನು (600 ಕ್ಕೂ ಹೆಚ್ಚು ಸಂಯೋಜಿತ ಕಾಲೇಜುಗಳನ್ನು ಹೊಂದಿತ್ತು) ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಸೆಂಟ್ರಲ್ ವಿಶ್ವವಿದ್ಯಾಲಯಗಳಾಗಿ ತ್ರಿವಿಭಜಿಸಲು ಸಮಿತಿಯೊಂದು ಶಿಫಾರಸು ಮಾಡಿತು.*

*__2012:__ 300 ಕಾಲೇಜುಗಳೊಂದಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ವಿಶ್ವವಿದ್ಯಾಲಯವನ್ನು ದ್ವಿವಿಭಜಿಸುವ ಯೋಜನೆಗಳನ್ನು ಘೋಷಿಸಲಾಯಿತು.*

*__ಮೇ 2015:__ ಸರ್ಕಾರವು ಮೂಲ ತ್ರಿವಿಭಜನೆ ಶಿಫಾರಸನ್ನು ಅನುಸರಿಸಲು ನಿರ್ಧರಿಸಿತು, ಬೆಂಗಳೂರು ಉತ್ತರ ಮತ್ತು ಬೆಂಗಳೂರು ಸೆಂಟ್ರಲ್ ವಿಶ್ವವಿದ್ಯಾಲಯಗಳನ್ನು ರಚಿಸಿತು, ಪ್ರತಿಯೊಂದಕ್ಕೂ ಸುಮಾರು 200 ಕಾಲೇಜುಗಳು ಸೇರಿದ್ದವು.*

*__ಜುಲೈ 2015:__ ತ್ರಿವಿಭಜನೆಗಾಗಿ ಮಸೂದೆಯನ್ನು ಅಂಗೀಕರಿಸಲಾಯಿತು.*

*__ಸೆಪ್ಟೆಂಬರ್ 2017:__ ಹೊಸ ವಿಶ್ವವಿದ್ಯಾಲಯಗಳನ್ನು ಉದ್ಘಾಟಿಸಲಾಯಿತು.*

*__2017:__ ತ್ರಿವಿಭಜನೆಯು ಪೂರ್ಣಗೊಂಡಿತು. ಬೆಂಗಳೂರು ವಿಶ್ವವಿದ್ಯಾಲಯವು ಜ್ಞಾನ ಭಾರತಿ ಕ್ಯಾಂಪಸ್ ಅನ್ನು ಉಳಿಸಿಕೊಂಡಿತು ಮತ್ತು ಇತರ ಎರಡು ವಿಶ್ವವಿದ್ಯಾಲಯಗಳನ್ನು ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ಮತ್ತು ಕೋಲಾರದಲ್ಲಿ (ನಂತರ ಶಿಡ್ಲಘಟ್ಟ ತಾಲೂಕಿನ ಜಂಗಮಕೋಟೆಗೆ ಸ್ಥಳಾಂತರಿಸಲಾಯಿತು) ಸ್ಥಾಪಿಸಲಾಯಿತು.*

ಸ್ನಾತಕೋತ್ತರ ವಿಭಾಗಗಳು ಹೆಚ್ಚಿನ ಸಂಖ್ಯೆಯ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳು ಹಾಗೂ ಸಮ್ಮೇಳನಗಳನ್ನು ಆಯೋಜಿಸಿವೆ. ಭಾರತ ಸರ್ಕಾರದ ಡಿಎಸ್‌ಟಿಯ 3 ವರ್ಷಗಳ ಅವಧಿಗೆ 9.0 ಕೋಟಿ ವೆಚ್ಚದ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ವೈಜ್ಞಾನಿಕ ಶ್ರೇಷ್ಠತೆಯ ಪ್ರಚಾರ (ಪರ್ಸ್) ಯೋಜನೆಗೆ ಈ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡಲಾಗಿದೆ. ಸಾಂಸ್ಥಿಕ ಎಚ್–ಸೂಚ್ಯದ ವಿಷಯದಲ್ಲಿ ವಿಶ್ವವಿದ್ಯಾಲಯದ ಸಂಶೋಧನಾ ಫಲಿತಾಂಶದ ಆಧಾರದ ಮೇಲೆ ಇದನ್ನು ವಿಶ್ವವಿದ್ಯಾಲಯಕ್ಕೆ ನೀಡಲಾಗಿದೆ. ಹಲವಾರು ಅತ್ಯಾಧುನಿಕ ಸಾಧನಗಳನ್ನು ಸೇರಿಸಲಾಗಿದೆ. ಹಲವಾರು ಪಿಜಿ ವಿಭಾಗಗಳನ್ನು ಯುಜಿಸಿ–ವಿಶೇಷ ನೆರವು ಮತ್ತು ಡಿಎಸ್‌ಟಿ–ಫಿಸ್ಟ್ ಕಾರ್ಯಕ್ರಮಗಳಿಗೆ ಆಯ್ಕೆ ಮಾಡಲಾಗಿದೆ, ಜೊತೆಗೆ ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಹೆಚ್ಚಿನ ಸಂಖ್ಯೆಯ ಪ್ರಾಯೋಜಿತ ವೈಯಕ್ತಿಕ ಅಧ್ಯಾಪಕರ ಸಂಶೋಧನಾ ಯೋಜನೆಗಳನ್ನು ಪರಿಚಯಿಸಲಾಗಿದೆ. ಇವುಗಳ ಜೊತೆಗೆ ಪಿಜಿ ವಿಭಾಗಗಳಲ್ಲಿನ ವಿವಿ ಅಧ್ಯಾಪಕರ ಹಲವಾರು ಪ್ರಮುಖ ಕ್ಷೇತ್ರಗಳನ್ನು ಸಿಪಿಇಪಿಎಗೆ ಮತ್ತು ನಿರ್ದಿಷ್ಟ ಕ್ಷೇತ್ರಗಳಲ್ಲಿ ಶ್ರೇಷ್ಠತೆಯ ಸಂಭಾವ್ಯ ಕೇಂದ್ರದ ಅಡಿಯಲ್ಲಿ ಸಹಾಯಕ್ಕಾಗಿ ಆಯ್ಕೆ ಮಾಡಲಾಗಿದೆ, 4.75 ಕೋಟಿ ರೂ. ಅನುದಾನದೊಂದಿಗೆ. ಹಲವಾರು ನವೀನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಭಾರತ ಮತ್ತು ವಿದೇಶಗಳಲ್ಲಿ ಹಲವಾರು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳು/ಸಂಸ್ಥೆಗಳೊಂದಿಗೆ ಶೈಕ್ಷಣಿಕ ಸಂಬಂಧಗಳನ್ನು ಸ್ಥಾಪಿಸಲಾಗಿದೆ. ವಿವಿ ಅಧ್ಯಾಪಕರು 6 ಶಿಕ್ಷಕರಿಗೆ ಯುಜಿಸಿ ಸಂಶೋಧನಾ ಪ್ರಶಸ್ತಿಗಳು, ಇಬ್ಬರು ಶಿಕ್ಷಕರಿಗೆ ಇಂಡೋ–ಯುಎಸ್ (ಒಬಾಮಾ) ಫೆಲೋಶಿಪ್, ಯುವ ವಿಜ್ಞಾನಿ ಪ್ರಶಸ್ತಿಗಳು, 4 ಪೇಟೆಂಟ್‌ಗಳು ಮುಂತಾದ ಹಲವಾರು ಮನ್ನಣೆಗಳು ಮತ್ತು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕೆಲವು ಅಧ್ಯಾಪಕರು ರಾಷ್ಟ್ರೀಯ ಅಕಾಡೆಮಿಗಳ ಫೆಲೋಗಳಾಗಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯವು ಒಟ್ಟು 3,36,000 ಪುಸ್ತಕಗಳನ್ನು ಮತ್ತು 175 ಪ್ರಸ್ತುತ ನಿಯತಕಾಲಿಕೆಗಳನ್ನು ಹೊಂದಿದೆ, ಇದರಲ್ಲಿ 8,554 ಪ್ರೌಢ ಪ್ರಬಂಧಗಳು ಮತ್ತು ಪ್ರಬಂಧಗಳು ಸೇರಿವೆ. ಯುಜಿಸಿ–ಇನ್ಫೋನೆಟ್ ಕಾರ್ಯಕ್ರಮದಡಿಯಲ್ಲಿ ಬೆಂಗಳೂರು ವಿವಿ ಗ್ರಂಥಾಲಯವು 7,500 ಆನ್‌ಲೈನ್ ಜರ್ನಲ್‌ಗಳನ್ನು ಪಡೆಯುತ್ತಿದೆ; ಶಿಕ್ಷಕರು ಮತ್ತು ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಆಯ್ಕೆ ಪ್ರವೇಶವನ್ನು ವಿಸ್ತರಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಧ್ಯುಕ್ತವಾಗಿ ಸರ್ಕಾರದ ವಿವಿ ಆಕ್ಟ್ 1964ರ ಪ್ರಕಾರ 1974ರಲ್ಲಿ ಸ್ಥಾಪಿಸಲಾಯಿತು. ಬೆಂಗಳೂರು ಪ್ರದೇಶದಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಈ ಹಿಂದೆ ಸಂಯೋಜಿತವಾಗಿದ್ದ ಅಸ್ತಿತ್ವದಲ್ಲಿರುವ ಕಾಲೇಜುಗಳು ಮತ್ತು ಸಂಸ್ಥೆಗಳನ್ನು ಈ ವಿವಿ ವ್ಯಾಪ್ತಿಗೆ ತರಲಾಯಿತು.

**ಸೆಂಟ್ರಲ್ ಕಾಲೇಜು:** ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಶೈಕ್ಷಣಿಕ ಅಭಿವೃದ್ಧಿಗಾಗಿ ದಿವಾನರ ಕಾಲದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಒತ್ತಾಸೆಯ ಮೇರೆಗೆ ವಿಶ್ವವಿದ್ಯಾಲಯದ ಮಾದರಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಆರಂಭಿಕ ನೆಲೆಯೇ ಐತಿಹಾಸಿಕ ಸೆಂಟ್ರಲ್ ಕಾಲೇಜಾಗಿತ್ತು, ಇದು ಮೈಸೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬೆಂಗಳೂರಿನ ವಿಜ್ಞಾನದ ಕ್ಯಾಂಪಸ್ ಆಗಿತ್ತು.

ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಮಹತ್ವದ ಪಾತ್ರ ವಹಿಸಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಂತಹ ಹಲವು ಇತರ ಸಂಸ್ಥೆಗಳು ಹಿಂದಿನ ವಿವಿ ರಚನೆ ಕೊಂಡಿಯಿಂದ ಕಳಚಿಕೊಂಡು ಪ್ರತ್ಯೇಕವಾಗಿ ಸಾಯತ್ವ ವಿವಿಗಳಾಗಿ ಹೊರ ಹೊಮ್ಮಿವೆ.

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಸೆಂಟ್ರಲ್ ವಿಶ್ವವಿದ್ಯಾಲಯ (ಈಗ ಬೆಂಗಳೂರು ಸಿಟಿ ವಿಶ್ವವಿದ್ಯಾಲಯ) ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಇವೆಲ್ಲವೂ ಕರ್ನಾಟಕದ ಬೆಂಗಳೂರಿನಲ್ಲಿರುವ ರಾಜ್ಯ ವಿಶ್ವವಿದ್ಯಾಲಯಗಳಾಗಿವೆ. ಬೆಂಗಳೂರು ವಿಶ್ವವಿದ್ಯಾಲಯವನ್ನು 2017 ರಲ್ಲಿ ತ್ರಿವಿಭಜಿಸಲಾಯಿತು, ಇದರಿಂದ ಉಳಿದ ಎರಡು ವಿಶ್ವವಿದ್ಯಾಲಯಗಳು ರೂಪುಗೊಂಡವು. ಬೆಂಗಳೂರು ಸೆಂಟ್ರಲ್ ವಿಶ್ವವಿದ್ಯಾಲಯವನ್ನು ನಂತರ ಬೆಂಗಳೂರು ಸಿಟಿ ವಿಶ್ವವಿದ್ಯಾಲಯ ಎಂದು ಮರುನಾಮಕರಣ ಮಾಡಲಾಯಿತು. ಸಂಯೋಜಿತ ಕಾಲೇಜುಗಳ ದೊಡ್ಡ ಸಂಖ್ಯೆಯನ್ನು ಉತ್ತಮವಾಗಿ ನಿರ್ವಹಿಸಲು ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ತ್ರಿವಿಭಜನೆಯು ಬೆಂಗಳೂರು ಪ್ರದೇಶದಲ್ಲಿ ಉನ್ನತ ಶಿಕ್ಷಣದ ಆಡಳಿತ ಮತ್ತು ಗಮನವನ್ನು ಸುಧಾರಿಸುವ ಗುರಿಯನ್ನು ಹೊಂದಿದ್ದು ಉನ್ನತ ಶಿಕ್ಷಣವನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಬ್ರಾಂಡ್–ಬೆಂಗಳೂರು ಹೆಸರನ್ನು ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡು ಅತ್ಯುತ್ತಮ ನಾಗರಿಕರನ್ನು ಅತ್ಯುತ್ತಮ ಶೈಕ್ಷಣಿಕ ತರಬೇತಿ ನೀಡಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಲ್ಲಿ ಹೆಜ್ಜೆ ಇಟ್ಟಿದೆ.

*1) ಕೇಂದ್ರೀಕೃತ ಉದ್ಯೋಗ ಕೋಶ: 2) ಬ್ರೈಲ್ ಸಂಪನ್ಮೂಲ ಕೇಂದ್ರ:*
*3) ಎಸ್‌ಸಿ/ಎಸ್‌ಟಿ ಕೋಶ: 4) ಕ್ರೀಡೆಗಳಿಗೆ ಪ್ರೋತ್ಸಾಹ:*
*5) ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್) ಭವನ:*
*6) ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ (ಯುಜಿಸಿ–ಎಚ್‌ಆರ್‌ಡಿಸಿ):*
*7) ಬಯೋ–ಪಾರ್ಕ್: 8) ಗಾಂಧಿ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ:*
*9) ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ:*
*10) ಆರೋಗ್ಯ ಕೇಂದ್ರ: 11) ವಿಶ್ವವಿದ್ಯಾನಿಲಯದ ಅಂಚೆ ಕೋರ್ಸ್‌ಗಳು ಮತ್ತು ದೂರ ಶಿಕ್ಷಣ ನಿರ್ದೇಶನಾಲಯವು ದೂರ ಕಲಿಯುವವರ ಹಿತದೃಷ್ಟಿಯಿಂದ ಸೇವೆ ಸಲ್ಲಿಸುತ್ತಿದೆ.*

# ಬಸವಣ್ಣ, ಎಲ್ಲರೂ ನಮ್ಮವರೆಂದ ಜನದಾರ್ಶನಿಕ



**ಸು**ಮಾರು 850 ವರ್ಷಗಳ ಹಿಂದೆಯೆ ಬಸವಣ್ಣನವರು ಸ್ವಾತಂತ್ರ್ಯ, ಸಮಾನತೆ, ವಿಚಾರವಾದ ಮತ್ತು ಭ್ರಾತೃತ್ವ ಆಧಾರಿತ ಸಮಾಜಕ್ಕಾಗಿ ಹಂಬಲಿಸಿದರು. ಜೀವಿಸಿದ್ದು 65 ವರ್ಷಗಳಾದರೂ (1131–1196) ಅವರ ಸಾಧನೆ ಪರ್ವತಸದೃಶ. ವಿಶ್ವಗುರು ಎಂಬ ಮನ್ನಣೆಗೆ ಪಾತ್ರರಾದ ಅವರು ಪರಿಚಯಿಸಿದ ಸಾಮಾಜಿಕ ಸುಧಾರಣೆಗಳು ಸಾರ್ವಕಾಲಿಕ. ಭಾರತೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಬಸವಣ್ಣನವರ ಬದುಕು ಮತ್ತು ಬರಹಗಳು ಒಂದು ಕ್ರಾಂತಿಕಾರಕ ಪರಿವರ್ತನೆಯನ್ನು ಪ್ರತಿನಿಧಿಸುತ್ತದೆ. ನೇರವಾಗಿ ದೈವತ್ವಕ್ಕೆ ಮುಟ್ಟಿಸುವ ಅವರ ವಚನಗಳು ಸರಳ, ಸತ್ಯ ಮತ್ತು ಪಾರದರ್ಶಕ ಶ್ರಮದ ದುಡಿಮೆಯ ಆರಾಧನೆಯ ಅತಿ ಉತ್ತುಂಗದ ರೂಪವೆಂದರು ಬಸವಣ್ಣನವರು. ಅವರು ಪ್ರತಿಪಾದಿಸಿದ ಸೇವೆಯ ಮತ್ತು ಅಹಿಂಸೆಯ ಬದುಕಿನ ಕ್ರಮ ಇಂದಿಗೆ ಹೆಚ್ಚು ಪ್ರಸ್ತುತವಾಗಿದೆ. ನಿಜವಾದ ಧರ್ಮವು ಕಠಿಣ ವ್ರತ, ಆಚರಣೆ, ಕಟ್ಟುಪಾಡುಗಳಲ್ಲಿ ಇಲ್ಲ, ಅದು ಸಮಾಜಪರ ಶ್ರದ್ಧೆಯಲ್ಲಿದೆ. ಪ್ರಾಮಾಣಿಕ ಕಾಯಕಕ್ಕೂ ಮೀರಿದ ಸ್ವರ್ಗವಿಲ್ಲ. ಯಾರನ್ನೂ ಕೂಡ ಹುಟ್ಟಿನಿಂದ ಅಳೆಯಬಾರದು ಮುಂತಾದ ಅವರ ಹೊಳಹುಗಳು ನಮ್ಮ ಬದುಕಿಗೆ ದಿಕ್ಸೂಚಿ ಗಳಾಗಿವೆ. ಇಡೀ ಜಗತ್ತಿನಲ್ಲೇ ಅನುಭವ ಮಂಟಪ ಅತಿ ಹಳೆಯ ಪ್ರಜಾತಾಂತ್ರಿಕ ವ್ಯವಸ್ಥೆ. ಭಾರತದ ಎಲ್ಲೆಡೆಗಳಿಂದ ಅಲ್ಲಿಗೆ ಬರುತ್ತಿದ್ದ ಸಂತರು, ಮೇಧಾವಿಗಳು, ದಾರ್ಶನಿಕರು ಸಂಪನ್ನ ಬದುಕಿನ ಬಗೆಗಿನ ರೂಪುರೇಶೆಗಳನ್ನು ಚರ್ಚಿಸುತ್ತಿದ್ದರು. ವಚನಗಳು ಆ ಮಾಹಾಮನೆಯ ವೇದಿಕೆಯಲ್ಲಿ ಪರಿಷ್ಕೃತಗೊಂಡು ಮತ್ತಷ್ಟು ಪ್ರಖರಗೊಂಡವು. ಲಿಂಗ, ವಯಸ್ಸು, ವರ್ಗ, ಪಂಥಗಳ ತರತಮವಿಲ್ಲದೆ ವಿಚಾರ ಮಂಡಿಸಬಹುದಿದ್ದ ಸಂಕೀರ್ಣ ಅದು. ಆ ಜನ ವಿಶ್ವವಿದ್ಯಾನಿಲಯದಲ್ಲಿ ಸಭ್ಯತೆಯ ಮುಖವಾಡಗಳು ನಿಷ್ಠುರವಾಗಿಯೆ ಟೀಕೆಗೊಳಗಾಗುತ್ತಿದ್ದವು. ಹೆಣ್ಣು, ಗಂಡು ಶಾರೀರಿಕವಾಗಿ ಭಿನ್ನವಾದರೂ ಅವರ ಆಧ್ಯಾತ್ಮಿಕ ಮಟ್ಟ ಒಂದೇ.

ಒಂದು ಸಮಾಜದ ಒಳಿತು ಮತ್ತು ಮನುಷ್ಯನ ಉದ್ಧಾರ ಕರುಣೆಯ ಅನುಷ್ಠಾನದಲ್ಲಿದೆ. ದಯೆಯೇ ಧರ್ಮದ ಮೂಲ. ಬಸವಣ್ಣನವರು ದಯೆಯಿಲ್ಲದ ಧರ್ಮ ಅದ್ಯಾವುದಯ್ಯ ಎಂದು ಸೆಡ್ಡು ಹೊಡೆದರು. ಸಹಾನುಭೂತಿ ಎಂಬ ಅಡಿಗಲ್ಲು ಸಡಿಲಗೊಳ್ಳುವುದರ ದುಷ್ಪರಿಣಾಮಗಳು ತಿಳಿದವೆ. ಅಸಮಾನತೆ ಮನುಷ್ಯಕೃತವೆ ಹೊರತು ಸ್ವಾಭಾವಿಕವಲ್ಲ. ಸ್ವತಃ ನಾವೇ ಕಲ್ಪಿಸಿಕೊಂಡ ಅನಿಷ್ಟವನ್ನು ನಾವೇ ತೊಡೆದುಹಾಕಬೇಕು, ಸಮಾನತೆಯ ಸಮಾಜ ಕಟ್ಟಿಕೊಳ್ಳಬೇಕು. ಬಸವಣ್ಣನವರ ವಿವೇಕವಾದ ಅವರ ವಚನಗಳು ಸರ್ವತ್ರ ಸಲ್ಲುತ್ತವೆ. ಅನಂತವಾದ 'ದೈವ'ವನ್ನು ಒಂದು ಸ್ಥಳ, ಒಂದು ರೂಪ ಅಥವಾ ರಚನೆಗೆ ಸೀಮಿತಗೊಳಿಸುವುದನ್ನು ಅವರು ಒಪ್ಪಲಿಲ್ಲ. ಅವರಿಗೆ ದೇಹವೇ ದೇವಾಲಯವಾಗಿ ಕಂಡಿತು. ಕಡೆದ ಶಿಲ್ಪಗಳು ನಶಿಸುತ್ತವೆ, ಆದರೆ ಮನುಷ್ಯರ ನಂಬಿಕೆ ಅನವರತ. ಹಣ್ಣು ಮರದಿಂದ ಬೇರ್ಪಟ್ಟರೆ ಅದಕ್ಕೆ ಮರದ ಆರೈಕೆ ಹೇಗೆ ತಾನೆ ಸಾಧ್ಯ? ಭಕ್ತಿಯು ಬಸವಣ್ಣನವರ ಪಾಲಿಗೆ ಜಾತಿ ಮತ್ತು ಅದರಂಥಹ ತಡೆಗೋಡೆಗಳನ್ನು ಭೇದಿಸುವ ಅಸ್ತ್ರವಾಯಿತು. ಅಂತೆಯೆ 'ದೈವ'ದ ಮೇಲಿನ ನಂಬಿಕೆ ಕಳೆದುಕೊಂಡರೆ ಭಕ್ತ ಅನಾಥ. ಇಲ್ಲಿ 'ದೈವ' ಎನ್ನುವುದು ಪ್ರಕೃತಿಯೇ ಹೌದು. ದೇಗುಲದ ಪರಿಕಲ್ಪನೆಯನ್ನು ಬಹು ಸರಳಗೊಳಿಸಿದ ಬಸವಣ್ಣರಂತಹ ಮಹಾನ್ ಸಂತ ಮತ್ತೊಬ್ಬರಿಲ್ಲ. ಅವರು ಅಹಿಂಸೆ ಮತ್ತು ಪ್ರೀತಿಯನ್ನು ಭಾರತದ ಸಂಸ್ಕೃತಿಯ ಕೇಂದ್ರವಾಗಿಸಿದರು. ದೇಶ, ಕಾಲದ ಹಂಗಿರದೆ ಶ್ರೇಷ್ಠರ ಚಿಂತನೆಗಳು ಒಂದೇ. ಗಾಂಧೀಜಿ ಬಸವಣ್ಣನವರನ್ನು ಭಾರತದ ಪ್ರಪ್ರಥಮ ಮುಕ್ತ ಚಿಂತಕ ಎಂದು ಶ್ಲಾಘಿಸಿದರು. ಬಸವಣ್ಣನವರು ಜಗಜ್ಯೋತಿ ಅನ್ನಿಸಿದರೆ ಗಾಂಧೀಜಿಯವರು ಮಹಾತ್ಮ ಅನ್ನಿಸಿದರು. ಈ ಇಬ್ಬರೂ ಮಹನೀಯರು ತಮ್ಮ ಸಾಮಾಜಿಕ ಮತ್ತು ರಾಜಕೀಯ ಜೀವನವನ್ನು ಆಧ್ಯಾತ್ಮಿಕಗೊಳಿಸಿದ್ದು ಮುಖ್ಯವಾಗುತ್ತದೆ. ಶರಣ ಚೆನ್ನಬಸವಣ್ಣ ಉಲ್ಲೇಖಿಸಿರುವಂತೆ ಏಕದೇವತಾ ಪರಿಕಲ್ಪನೆಯನ್ನು ಎತ್ತಿಹಿಡಿದ ಬಸವಣ್ಣನವರು ಭಕ್ತಿಯ ಕೊಯಿಲು.

ಉದಾತ್ತರನ್ನು ಪೀಳಿಗೆಗಳು ಸ್ಥಾವರವಿಲ್ಲದೆಯೂ ನೆನೆಯುತ್ತವೆ. ಸ್ಥಾವರವನ್ನು ಎತ್ತರಿಸುತ್ತ ಹೋದರೆ ಜಂಗಮ ಸೊರಗುವುದು. ಮಣ್ಣಿನ ಮೂರ್ತಿ ಮಳೆಗೆ, ಮೇಣದ ಮೂರ್ತಿ ತಾಪಕ್ಕೆ ಕರಗುವುದು. ಕಲ್ಲಿನ ವಿಗ್ರಹಕ್ಕೆ ಸವೆತ, ಹಕ್ಕಿಗಳ ಆವಾಸ ತಪ್ಪಿದ್ದಲ್ಲ. ಇನ್ನು ಲೋಹದ ಮೂರ್ತಿಗೊ ಕಳವಿನ ಆತಂಕ. ಹಾಗಾಗಿ ಮನಸ್ಸಿನಲ್ಲಿ ಕಡೆದ ಪ್ರತಿಮೆ ಅಳಿವಿಲ್ಲದೆ ಉಳಿಯುತ್ತದೆ. ಸ್ಥಾವರ ನಮ್ಮನ್ನು ಕಟ್ಟಿಹಾಕುತ್ತದೆ, ಜಂಗಮ ಹೊಸ ಹೊಸ ಗ್ರಹಿಕೆಗಳಿಗೆ ಅನುವು ಮಾಡಿಕೊಡುತ್ತದೆ. ಇಂಥಹ ಶ್ರೇಷ್ಠರು ಹೀಗೆ ಸನ್ಮಾರ್ಗದಲ್ಲಿ ಬದುಕನ್ನು ಗೌರವಿಸಿ ಬಾಳಿದರು ಎನ್ನುವ ಸಂದೇಶ ಸಾರಿ ನಮ್ಮನ್ನು ಪ್ರಭಾವಿಸುತ್ತದೆ. ಅಲ್ಲಮ ಪ್ರಭು 'ಆಕಾಶವ ಮೀರುವ ತರುಗಿರಿಗಳುಂಟೆ? ನಿರಾಕಾರವ ಮೀರುವ ಆಕಾರವುಂಟೆ? ಗುಹೇಶ್ವರಲಿಂಗವ ಮೀರುವ ಒಡೆತನವುಂಟೆ?' ಎಂದು ಪ್ರಶ್ನಿಸಿದರು. ಬಸವಣ್ಣನವರು ಕಾಯಕವೇ ಕೈಲಾಸ ಎನ್ನುವಾಗ ಕಾಯಕದ ದೈವತ್ವ ಮತ್ತು ಕಾಯಕದ ಘನತೆ–ಎರಡೂ ಧ್ವನಿಸುತ್ತವೆ. ರಸ್ತೆ, ನಿಲ್ದಾಣ, ಸೇತುವೆಗಳಿಗೆ ಧೀಮಂತರ ಹೆಸರುಗಳನ್ನಿಟ್ಟರೆ ಮಾತ್ರಕ್ಕೆ ಅವರ ಆದರ್ಶಗಳು ಅಮರವೆಂದಲ್ಲ. ಅವರು ಬೋಧಿಸಿದ ಒಳ್ಳೆಯ ಪಾಠ, ನಡೆದು ಕೊಂಡ ಶಿಸ್ತು ಮತ್ತು ಸಂಯಮ ನಮ್ಮ ದಿನಗಳಲ್ಲಿ ಇದ್ದರಾಯಿತು. ಪ್ರಾಮಾಣಿಕ ಮತ್ತು ಋಜು ಮಾರ್ಗದಲ್ಲಿ ಸಂಪತ್ತು ಗಳಿಸಿ, ನಿಮಗೆ ಅಗತ್ಯವಾದಷ್ಟು ಬಳಸಿ ಉಳಿದುದನ್ನು ಪರರಿಗೆ ದಾಸೋಹವಾಗಿ ನೀಡುವುದು ಮಾದರಿ. ಉಣ್ಣುವನಿಗೆ ನಡೆ ನಡೆ ಎಂದು ಉಣ್ಣದ ಮೂರ್ತಿಗೆ ಅನ್ನವನ್ನು ಸಮರ್ಪಿಸುವುದು, ದಿಟ ನಾಗರವನ್ನು ಕೊಂದು ಕಲ್ಲ ನಾಗರಕ್ಕೆ ಹಾಲೆರೆಯುವುದು, ಮೂಕ ಪ್ರಾಣಿಗಳ ಬಲಿ..... ಹೀಗೆ ವಿಪರ್ಯಾಸಗಳು ಈ ವಿದ್ಯುನ್ಮಾನ ಯುಗದಲ್ಲೂ ನಮ್ಮ ಕಣ್ಮುಂದೆ ನಡೆಯುತ್ತಿವೆ. ಎಲ್ಲರೂ ನಮ್ಮವರೇ ಎಂಬ ಭಾವದಿಂದ ಸಾಮಾಜಿಕ ತಾರತಮ್ಯ ಮತ್ತು ಮೂಢನಂಬಿಕೆ ಗಳನ್ನು ತೊರೆದರೆ ತಾನೇ ತಾನಾಗಿ ಶಾಂತಿ, ನೆಮ್ಮದಿ ನೆಲೆಯೂರುವುದು. ಬಸವಣ್ಣನವರೆಂಬ ಮಹಾನ್ ಜನಸಂತ ನಮ್ಮ ಅಂತರಂಗ, ಬಹಿರಂಗದಲ್ಲಿ ಇರಬೇಕಿದೆ. ನಾವೆಲ್ಲರೂ ಬಸವೇಶ್ವರರ ಸದಾಶಯಗಳನ್ನು ಕಾಯಾ, ವಾಚಾ, ಮನಸಾ ಪಾಲಿಸಲು ನಿಶ್ಚಯಿಸೋಣ.

**–ಬಿಂಡಿಗನವಿಲೆ ಭಗವಾನ್, 9886798182**

# ಕರ್ಮ ಫಲ

**8**1 ವರ್ಷದ ಆ ಕಪ್ಪು ಟೋಪಿದಾರಿ, ಕಪ್ಪು ಪ್ಯಾಂಟ್ ಜೊತೆ ಬಿಳಿ ಅಂಗಿ ತೊಟ್ಟಿದ್ದರು. ಜೊತೆಯಲ್ಲೊಂದು ಬಟ್ಟೆ ಚೀಲವಿತ್ತು ಕಂಕುಳಲ್ಲಿ. ಸುಮಾರು ಅರ್ಧ ಗಂಟೆ ಆಗಿತ್ತು ಮೆಡಿಕಲ್ ಶಾಪ್ ನಲ್ಲಿ ತಮ್ಮ 4 ಮಾತ್ರೆಗಳ ಲಿಸ್ಟ್ ಕೊಟ್ಟು, ಅವುಗಳ ದರ ವಿಚಾರಿಸುತ್ತಿದ್ದರು. ತಮ್ಮ ಚಿಕ್ಕ ಮೊಬೈಲ್‌ನ ಕ್ಯಾಲ್ಕ್ಯೂಲೇಟರ್‌ನಲ್ಲಿ ಪದೇಪದೇ ಲೆಕ್ಕ ಮಾಡುತಿದ್ದರು. ಕೊನೆಗೆ 17 ದಿನದ ಔಷಧಿ ಕೊಡುವಂತೆ ತಿಳಿಸಿದರು. ಅಂಗಡಿಯಾತ ಚೀಟಿಯಲ್ಲಿದ್ದಂತೆ 30 ದಿನದ ಔಷದಿ ತಂದಿದ್ದ, ಮತ್ತೆ 17 ದಿನ ಎಂದಾಗ, ಮತ್ತೆ ಮತ್ತೆ ಒಂದೆರಡು ದಿನ ಕಡಿಮೆ ಮಾಡುತ್ತಿದ್ದಾಗ ಆತ ತನ್ನ ತಾಳ್ಮೆ ಕಳೆದುಕೊಂಡ. ಪಾಪ ಅಜ್ಜನಲ್ಲಿ ಹಣ ಇಲ್ಲ ಎಂಬ ಸತ್ಯ ಆತನಿಗೆ ತಿಳಿದಿರಲಿಲ್ಲ. ಜೋರಾಗಿ ಕೂಗಿದ, ಹೋಗ್ರಿ ಇಲ್ಲಿಂದ. ದರಿದ್ರದವ್ರು ಬೆಳಿಗ್ಗೆ ಬೆಳಿಗ್ಗೆ ಎಲ್ಲೆಲ್ಲಿಂದ ಬರ್ತೀರ?. ಕೂಗಿನೊಂದಿಗೆ ವೃದ್ಧರನ್ನು ಜೋರಾಗಿ ಹೊರಗೆ ತಳ್ಳಿಬಿಟ್ಟಿದ್ದ.

ಅಲ್ಲೇ ಕೆಳಗೆ ಬಿದ್ದ ವೃದ್ಧರ ಕನ್ನಡಕ ಪುಡಿಯಾಗಿತ್ತು. ಮೆಡಿಕಲ್ ಶಾಪ್ ಗೆ ಬಂದಿದ್ದ ಎಲ್ಲಾ ಗ್ರಾಹಕರು ಒಮ್ಮೆ ತಿರುಗಿ ನೋಡಿದರು ವೃದ್ಧರನ್ನು. ಅಂಗಿಗೆ ಅಂಟಿದ್ದ ಧೂಳನ್ನು ಒರೆಸಿಕೊಳ್ಳುತ್ತಾ ಅಲ್ಲಿಂದ ಎದ್ದು ಹೊರ ನಡೆದರು. ಅವಮಾನ ದುಃಖ ಎರಡೂ ಒಟ್ಟಿಗೆ ಆಗಿದ್ದರಿಂದ ಕಣ್ಣೆರಡು ಹನಿದಿದ್ದವು ಆ ಕ್ಷಣ. ಅಷ್ಟರಲ್ಲಿ ಅಲ್ಲಿ ವಿಸ್ಮಯವೊಂದು ನಡೆದಿತ್ತು. ದೂಡಿದ್ದ ವ್ಯಕ್ತಿಗೊಂದು ಫೋನ್ ಕಾಲ್ ಬರುತ್ತದೆ. ಫೋನ್ ಎತ್ತಿ ಮಾತಾಡಿದವನ ಮುಖ ಬಿಳಿಚಿಕೊಂಡಿದೆ. ತಕ್ಷಣ ಆತ ಓಡೋಡಿ ಹೋಗಿ ವೃದ್ಧರ ಬಳಿ ಕ್ಷಮೆ ಕೇಳಿ ಮತ್ತೆ ಅವರನ್ನು ಮೆಡಿಕಲ್ ಶಾಪ್‌ಗೆ ಕರೆದೊಯ್ಯುತ್ತಾನೆ. ಅವರ 15 ದಿನದ ಎಲ್ಲಾ ಔಷದಿಗಳನ್ನು ಕೊಡುತ್ತಾನೆ. ಈ ಬಾರಿ ವೃದ್ಧರಿಗೆ ತುಂಬಾ ಖುಷಿಯಾಗಿ ಹಣ ಕೊಡುತ್ತಾರೆ. ಹಣ ಕೊಟ್ಟು ಇನ್ನೇನು ಹೊರಗೆ ಹೋಗಬೇಕು ಅಷ್ಟರಲ್ಲಿ ಯಾರೋ ಒಬ್ಬರು ವೃದ್ಧರನ್ನು ಕರೆಯುತ್ತಾರೆ. ವೃದ್ಧರು ಹಿಂದೆ ತಿರುಗಿ ನೋಡುತ್ತಾರೆ. ಮತ್ತೆ ಅದೇ ಸೇಲ್ಸ್ ಮನ್ ಅಲ್ಲಿ ಪ್ರತ್ಯಕ್ಷನಾಗಿದ್ದ. ಕುತೂಹಲದಿಂದ "ಏನಪ್ಪಾ?" ಎಂದರು.

ಸರ್, ಇವತ್ತು ನಮ್ಮ ಮೆಡಿಕಲ್ ಶಾಪ್‌ಗೆ ಬಂದ ಲಕ್ಕಿ ಕಸ್ಟಮರ್ ಒಬ್ಬರಿಗೆ 2 ವಿಶೇಷ ಆಫರ್ ಇದೆ. ನೀವು ಇವತ್ತಿನ ನಮ್ಮ ಲಕ್ಕಿ ಕಸ್ಟಮರ್ ಎಂದಾಗ ವೃದ್ಧರಿಗೆ ತಮ್ಮ ಕಿವಿಯನ್ನೇ ನಂಬಲಾಗಲಿಲ್ಲ. ಆಸಕ್ತಿಯಿಂದ ಕೇಳಿದರು ಎಂತ 2 ಆಫರ್ ಎಂದು. ಸೇಲ್ಸ್ ಮೆನ್ ಹೇಳಿದ ಮೊದಲನೆಯದ್ದು ಇವತ್ತು ನೀವು ಕೊಂಡ ಔಷದಿಯನ್ನು ಡಬಲ್ ಮಾಡಿ ಕೊಡಲಾಗುವುದು. ಅಂದರೆ ನೀವು ಕೊಂಡುಕೊಂಡ 15 ದಿನಕ್ಕೆ ಬದಲಾಗಿ ನಿಮಗೆ ತಿಂಗಳ ಔಷಧಿ ಕೊಡುತ್ತೇವೆ ಎಂದವನೇ ಮತ್ತೆ 15 ದಿನಗಳ ಅದೇ ಔಷಧಿಗಳನ್ನು ಕಟ್ಟಿ ಕೊಟ್ಟಿದ್ದ. ವೃದ್ಧರಿಗೆ ನಿಜಕ್ಕೂ ಖುಷಿಯಾಗಿತ್ತು. ಈ ಬಾರಿಯ ಸಂಬಳದಲ್ಲಿ ಆ ಬಡ ಹುಡುಗನ ಶಾಲೆಯ ಫೀಸ್ ಕಟ್ಟಿದ್ದು ನೆನಪಾಗಿತ್ತು ಅವರಿಗೆ. ತಿಂಗಳ ಕೊನೆಯಲ್ಲಿ ಔಷಧಿಗೆ ಹಣ ಕಮ್ಮಿಯಾಗುತ್ತದೆಂದು ತಿಳಿದಿರಲಿಲ್ಲ ಅವರು. ದೇವರಿದ್ದಾನೆ ಎಂಬುದು ಈಗ ಸ್ಪಷ್ಟವಾಗಿ ಅರಿವಾಗಿತ್ತು ಅವರಿಗೆ. ಮತ್ತೆ ಕುತೂಹಲವಿತ್ತು ಅವರಲ್ಲಿ. "ಇನ್ನೊಂದು ಆಫರ್ ಏನು?" ಎಂದು ಕೇಳಿಯೇ ಬಿಟ್ಟರು.

ಸೇಲ್ಸ್ ಮೆನ್ ಒಂದು ಚಿಕ್ಕ ಪ್ಲಾಸ್ಟಿಕ್ ಬಾಕ್ಸ್ ಅನ್ನು ಅವರ ಎದುರಿಗಿಟ್ಟ "ಇಲ್ಲಿಂದ ಒಂದು ಚೀಟಿ ತೆಗೆಯಿರಿ. ಅಲ್ಲಿ ಏನಾದರೊಂದು ಗಿಫ್ಟ್



ಇರಬಹುದು ಸರ್" ಎಂದ. ಕುತೂಹಲ ಇನ್ನೂ ಹೆಚ್ಚಾಗಿತ್ತು, ಒಂದು ಚೀಟಿ ಎತ್ತಿದರು ಬಾಕ್ಸ್ ನಿಂದ. ಸರ್ ನೀವೇ ಓದಿ ಹೇಳಿ ಎಂದ ಹುಡುಗ. ಬಿದ್ದು ಪುಡಿಯಾಗಿದ್ದ ಗಾಜಿನ ಒಂದು ತುಂಡನ್ನು ಮೆಲ್ಲನೆ ಎತ್ತಿದವರೇ ಮೆಲ್ಲಗೆ ಓದಿದರು. ಆಶ್ಚರ್ಯ ಕನ್ನಡಕ ಎಂದಿತ್ತು ಅಲ್ಲಿ. "ಸರ್ ಕಂಗ್ರಾಜುಲೇಷನ್ ಪಕ್ಕದ ಶಾಪ್ಗೆ ಹೋಗಿ ನಿಮಗೆ ಆಗುವ ಒಂದು ಕನ್ನಡಕ ಖರೀದಿಸಿ, ಹಣ ನಾವೇ ಕೊಡುತ್ತೇವೆ ಇದೇ ನಿಮ್ಮ 2 ನೆಯ ಅದೃಷ್ಟ ಬಹುಮಾನ" ಎಂದ ಸೇಲ್ಸ್ ಮೆನ್. ಖುಷಿಯಿಂದ ಈ ಬಾರಿ ಅಜ್ಜನ ಕಣ್ಣುಗಳು ಮಂಜಾಗಿದ್ದವು. ಪಕ್ಕದ ಕನ್ನಡಕದ ಅಂಗಡಿಗೆ ಓಡಿದರು. 15 ನಿಮಿಷದಲ್ಲಿ ಅಜ್ಜ ಹೊಸ ಕನ್ನಡಕದೊಂದಿಗೆ ಬಂದರು. ಕನ್ನಡಕದ ಹಣ ಪಾವತಿಸಲಾಯಿತು. ಅಜ್ಜನಿಗೆ ಸಂತೋಷವಾಗಿತ್ತು. ಮೆಡಿಕಲ್ ನವನಿಗೆ ಕೈಮುಗಿದು ಹೊರಟರು. ಅಲ್ಲೇ ಮೆಟ್ಟಿಲು ಹತ್ತುವಾಗ ಏನೋ ನೆನಪಾಯಿತು ತಟ್ಟನೆ ಹಿಂದೆ ತಿರುಗಿದರು. ಅವರಿಗೂ ಸಂದೇಹವಿತ್ತು ಇಷ್ಟೆಲ್ಲವನ್ನೂ ನನಗೆ ಕೊಟ್ಟಿರುವ ಆ ಪುಣ್ಯಾತ್ಮನನ್ನು ನೋಡಬೇಕಿತ್ತು ಅವರಿಗೆ. ವಾಪಾಸ್ ಆ ಸೇಲ್ಸ್ ಮೆನ್ ಬಳಿ ಬಂದರು. ನನಗೆ ಇಷ್ಟೆಲ್ಲ ಕೊಟ್ಟಿರುವ ಆ ಪುಣ್ಯಾತ್ಮ ಯಾರು ನನಗೊಮ್ಮೆ ನೋಡಬೇಕಿತ್ತು ಅವರನ್ನು ಕೇಳಿಯೇ ಬಿಟ್ಟರು. ಅಷ್ಟರಲ್ಲಿ ಫೋನ್ ಮತ್ತೆ ರಿಂಗ್ ಆಗಿತ್ತು. ಸೇಲ್ಸ್ ಮೆನ್ ಹಲೋ ಎಂದ. ಆ ವೃದ್ಧರನ್ನು ಒಳಗೆ ಮ್ಯಾನೇಜಿಂಗ್ ಚೇಂಬರ್ ಒಳಗೆ ಕಳಿಸುವಂತೆ ತಿಳಿಸಲಾಯಿತು. ಮೆಲ್ಲನೆ ಬಾಗಿಲು ದೂಡಿ ಒಳಗೆ ಹೋದರು. ಕಥೆಗೆ ಅಲ್ಲೊಂದು ಆಶ್ಚರ್ಯಕರ ತಿರುವಿತ್ತು.

ಅಲ್ಲಿ ದೊಡ್ಡ CC ಟಿವಿಯಲ್ಲಿ ಸೂಟ್ ಧಾರಿ ವ್ಯಕ್ತಿಯೊಬ್ಬ ಎಲ್ಲವನ್ನೂ ವೀಕ್ಷಿಸುತಿದ್ದ. ಸೀದಾ ಬಂದು ವೃದ್ಧರ ಕಾಲು ಹಿಡಿದು ಆಶೀರ್ವಾದ ಪಡೆದ. ಹೊಸ ಕನ್ನಡಕ ಸರಿ ಮಾಡಿ ನೋಡಿದರು ವೃದ್ಧರು ಪರಿಚಯ ಸಿಕ್ಕಿರಲಿಲ್ಲ ಅವರಿಗೆ. ಆತನೇ ಹತ್ತಿರ ಬಂದ. ಸರ್ ನಾನು ನಿಮ್ಮ ಒಬ್ಬ ವಿದ್ಯಾರ್ಥಿ. ಅಂದು ನಮ್ಮ ತಂದೆ ನನ್ನನ್ನು 5 ನೆಯ ತರಗತಿಯಿಂದ ಬಿಡಿಸಿ ಕೆಲಸಕ್ಕೆ ಹಾಕಿದಾಗ, ನೀವೇ ಮನೆಗೆ ಬಂದು ನನ್ನ ಫೀಸ್ ಕಟ್ಟಿ ಶಾಲೆಗೆ ಸೇರಿಸಿದಿರಿ.

(ಮುಂದಿನ ಸಂಚಿಕೆಗೆ)











## ಕವನ....

Editor, Printer, Publisher and Owned by Tulasidevi K S # 555, 17th Cross, SBM Colony, Srinivasanagar, Banashankari, Bengaluru-560050.
Printed At : M/s Apoorva Printers & Publishers, 179, Suggata Road, H.M. Halli, Bengaluru-562157, Editor Tulasidevi K S